15 January 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಭವಿಷ್ಯದ ಮುನ್ನುಡಿ

info.varthaman@gmail.com
ಸಂಪಾದಕ: ಕೆ.ಎನ್.ರವಿ
9742504916
ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು
ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 76 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಶುಭಾಶಯ

ವರ್ತಮಾನ ಪತ್ರಿಕೆಯ ಓದುಗರು ಮತ್ತು ಜಾಹೀರಾತುದಾರರಿಗೆ ಸಂಕ್ರಾಂತಿ ಹಬ್ಬದ ಶುಭಾಶಯಗಳು.

ಬಿಡುವು

ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಗುರುವಾರ (ಇಂದು) ವತಮಾನ ಪತ್ರಿಕೆಗೆ ರಜೆ ಇರುವುದರಿಂದ ಶುಕ್ರವಾರ(ನಾಳಿನ) ಸಂಚಿಕೆ ಪ್ರಕಟವಾಗುವುದಿಲ್ಲ.

ಜ.22ರಿಂದ ವಿಶೇಷ ಅಧಿವೇಶನ

* ನರೇಗಾ ಕಾಯ್ದೆ ಕುರಿತು ಚರ್ಚೆಗೆ ಸಂಪುಟ ಸಭೆ ನಿರ್ಧಾರ

ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಗೆ (ನರೇಗಾ) ಸಂಬಂಧಿಸಿದಂತೆ ಕುರಿತು ಚರ್ಚಿಸಲು ರಾಜ್ಯ ಸರ್ಕಾರ ಜನವರಿ 22ರಿಂದ ಒಂದು ವಾರ ವಿಧಾನಮಂಡಲ ವಿಶೇಷ ಜಂಟಿ ಅಧಿವೇಶನ ಕರೆಯಲಾಗಿದೆ.

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಜನವರಿ 22ರಿಂದ 31ರ ವರೆಗೆ ವಿಶೇಷ ಅಧಿವೇಶನ ನಡೆಸಲು ನಿರ್ಧರಿಸಲಾಗಿದೆ.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ ಪಾಟೀಲ್ ಅವರು, ಜನವರಿ 22ರಂದು ಉಭಯ ಸದನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ವಿಧಾನಸಭೆ ಜಂಟಿ ಅಧಿವೇಶನವನ್ನು ಜ.22ರಂದು 11 ಗಂಟೆಗೆ ಆರಂಭಿಸಲಾಗುತ್ತಿದ್ದು, ವಿಧಾನಮಂಡಲ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಲಿದ್ದಾರೆ. ರಾಜ್ಯಪಾಲರ ಜಂಟಿ ಭಾಷಣ ಅನುಮೋದನೆಗೆ ಮುಖ್ಯಮಂತ್ರಿಗೆ ಪರಮಾಧಿಕಾರ ನೀಡಲಾಗಿದೆ ಎಂದು ಅವರು ತಿಳಿಸಿದರು.

ಕೇಂದ್ರ ಸರ್ಕಾರ ಮನರೇಗಾ ಯೋಜನೆ ಹೆಸರು ಬದಲಾವಣೆ ಮಾಡಿರುವುದು ನಿಯಮ ಬಾಹಿರ. ಈ ಬಗ್ಗೆ ವಿಶೇಷ ಪುಟ 4ಕ್ಕೆ

ಬಡವರಿಗೆ ಕೇಂದ್ರದ ದ್ರೋಹ

ಬೆಂಗಳೂರು: ಕೇಂದ್ರ ಸರ್ಕಾರ ನರೇಗಾ ಯೋಜನೆಯ ಮೂಲ ಸ್ವರೂಪವನ್ನು ಬದಲಾವಣೆ ಮಾಡುವ ಮೂಲಕ ಬಡವರಿಗೆ ದ್ರೋಹ ಮಾಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಾಗ್ದಾಳಿ ನಡೆಸಿದರು. ನರೇಗಾ ವಿಚಾರಕ್ಕೆ ಸಂಬಂಧ ವಿಧಾನಸೌಧದಲ್ಲಿ ಸಂಪುಟ ಸಭೆ ನಂತರ ಮಾತನಾಡಿದ ಅವರು, ಯೋಜನೆಯಡಿ ಹಿಂದೆ ಕೇಂದ್ರ ಶೇ.100ರಷ್ಟು ಹಣ ಕೊಡುತ್ತಿತ್ತು, ಆದರೆ ಈಗ ಶೇ.40ರಷ್ಟು ಹಣವನ್ನು ರಾಜ್ಯವೇ ಕೊಡಬೇಕು. ಹೊಸ ಕಾಯ್ದೆ ಪ್ರಕಾರ ಕೇಂದ್ರ ಹೇಳಿದ ಕಡೆ ಕೆಲಸ ಮಾಡಬೇಕಿದೆ. ಬಡವರಿಗೆ ದ್ರೋಹ ಮಾಡಲಾಗಿದೆ ಎಂದು ರಾಮಲಿಂಗಾರೆಡ್ಡಿ ಆರೋಪಿಸಿದರು. ಅಲ್ಲದೆ ಬಿಜೆಪಿಗರು ನಕಲಿ ರಾಮನ ಭಕ್ತರಾಗಿದ್ದು, ಮತಕ್ಕಾಗಿ ರಾಮ ಅಂತಾರೆ. ಎಲ್ಲ ದೇವಸ್ಥಾನ ಕಟ್ಟಿದ್ದು ನಾವಾಗಿರುವ ಕಾರಣ ನಿಜವಾದ ರಾಮನ ಭಕ್ತರು ನಾವೇ. ಬಿಜೆಪಿಯವರು ನಕಲಿ ಹಿಂದೂಗಳು ಎಂದು ಕಿಡಿಕಾರಿದರು.

ರಾಮನೂರಿನಲ್ಲಿ ರಾಮೋತ್ಸವ ಶುರು

ಶ್ರೀರಾಮತಾರಕ ಯಜ್ಞದ ಮೂಲಕ ಆರಂಭ । ಜ.17ರಂದು ಶ್ರೀನಿವಾಸ ಕಲ್ಯಾಣೋತ್ಸವ

ವಿವಿಧ ಸ್ಪರ್ಧೆಗಳ ಆಯೋಜನೆ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ

ನಟ ಸುದೀಪ್, ರಚಿತಾರಾಂ ಸೇರಿದಂತೆ ಖ್ಯಾತ ನಟ–ನಟಿಯರಿಂದ ರಸಮಂಜರಿ

ರಾಮನಗರ: ರಾಮೋತ್ಸವ ಕೇವಲ ಧಾರ್ಮಿಕ ಕಾರ್ಯಕ್ರಮ ಮಾತ್ರವಲ್ಲ. ಪ್ರತಿಭಾ ಅನಾವರಣಕ್ಕೆ ವೇದಿಕೆ ಕೂಡ. ಜಾತಿ, ಮತ, ಪಕ್ಷ ಬೇದ ಇಲ್ಲದೆ ಎಲ್ಲ ನಾಗರೀಕರು ರಾಮೋತ್ಸವದಲ್ಲಿ ಭಾಗಿಯಾಗಬೇಕು ಎಂಬ ಸದುದ್ದೇಶದೊಂದಿಗೆ ಆಚರಿಸಲಾಗುತ್ತಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುವ ರಾಮೋತ್ಸವ ಕಾರ್ಯಕ್ರಮದ ಸಿದ್ದತೆಗಳನ್ನು ವೀಕ್ಷಿಸಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಇದೇ ಮೊದಲ ಬಾರಿಗೆ ರಾಮನಗರದಲ್ಲಿ ರಾಮೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜ.15 ರಿಂದ 18ರವೆಗೆ ಧಾರ್ಮಿಕ ಕಾರ್ಯಕ್ರಮ ಶ್ರೀ ರಾಮತಾರಕ ಯಜ್ಞ ಸೇರಿದಂತೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಶ್ರೀರಾಮರನ್ನು ಭಕ್ತಿ ಪೂರ್ವಕವಾಗಿ ನಮಿಸುವ ಕಾರ್ಯಕ್ರಮ ಇದಾಗಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು. ಈ ವೇಳೆ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಕೆ.ರಾಜು, ಪ್ರಮುಖರಾದ ಸಿ.ಎನ್.ಆರ್. ವೆಂಕಟೇಶ್, ನರಸಿಂಹಯ್ಯ (ಟೌನ್ ಎಂ.ಎಲ್.ಎ), ರಾಜಶೇಖರ್, ಜಯಣ್ಣ ಮುಂತಾದವರು ಇದ್ದರು.

ಸ್ತಬ್ದ ಚಿತ್ರಗಳ ವೈಭವ!

ಜ.15ರಂದು ಸಂಜೆ 6 ಗಂಟೆಗೆ ನಗರದ ನಿಗಧಿತ 6 ವೃತ್ತಗಳಲ್ಲಿ ಮಡಿಕೇರಿಯ ಸ್ತಬ್ದ ಚಿತ್ರಗಳ ಪ್ರದರ್ಶನ ನಡೆಯಲಿದೆ. ಕಾಕಾಸುರನನ್ನು ವಧೆ ಮಾಡಿದ ಶ್ರೀರಾಮನ ಕಥೆಯನ್ನು ಸ್ತಬ್ದ ಚಿತ್ರದ ಮೂಲಕ ಪ್ರದರ್ಶಿಸಲಾಗುವುದು. ಜೊತೆಗೆ ಗಣೇಶ, ಆಂಜನೇಯ, ಚಾಮುಂಡೇಶ್ವರಿ ಮಾತೆಯ ಮಹಿಮೆಯನ್ನು ಸಾರುವ ಸ್ತಬ್ದ ಚಿತ್ರಗಳು ಪ್ರದರ್ಶನ ನೀಡಲಿವೆ ಎಂದರು.

ಜ.18ರಂದು ಕಿಚ್ಚಾ ಸುದೀಪ್, ರಚಿತಾರಾಂ ರಿಂದ ಸಂಗೀತ ಸಂಜೆ

ಜ.18ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಕೆಂಗಲ್ ಹನುಮಂತಯ್ಯ ಕ್ರೀಡಾ ಕೇಂದ್ರದಲ್ಲಿ ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆ ನಡೆಯಲಿದೆ. ಸರ್ಕಾರಿ ಈಜುಕೊಳದಲ್ಲಿ ಈಜು ಸ್ಪರ್ಧೆ ಆಯೋಜನೆಯಾಗಿದೆ. 11 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಎಲ್.ಕೆ.ಜಿ, ಯುಕೆಜಿ ಮಕ್ಕಳಿಗೆ ಮಧ್ಯಾಹ್ನ 2 ಗಂಟೆಯಿಂದ 1 ರಿಂದ 4ನೇ ತರಗತಿ ಮಕ್ಕಳಿಗೆ ಫ್ಯಾನ್ಸಿ ಡ್ರೆಸ್ ಸ್ಪರ್ಧೆ ನಡೆಯಲಿದೆ. ಇದೇ ದಿನ ಬೆಳಿಗ್ಗೆ 10 ರಿಂದ 12 ಗಂಟೆಯವರೆಗೆ ಟಿಪ್ಪುನಗರ ಸೇರಿದಂತೆ ಮೂರು ಸ್ಥಳಗಳಲ್ಲಿ ಮೆಹಂದಿ ಸ್ಪರ್ಧೆ, ಸಂಜೆ 5.30ರಿಂದ 7 ಗಂಟೆಯವರೆಗೆ ದೇಹದಾರ್ಢ್ಯ ಸ್ಪರ್ಧೆ ಆಯೋಜನೆಯಾಗಿದೆ. ಸಂಜೆ 7.30ರಿಂದ ಚಿತ್ರನಟರುಗಳಾದ ಸುದೀಪ್, ರಚಿತಾರಾಮ್ ಸೇರಿದಂತ ಖ್ಯಾತ ಚಲನಚಿತ್ರ ನಟ –ನಟಿಯರು ರಸಮಂಜರಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ಕೊಟ್ಟರು.

ಜ.16ರಂದು ಮಲ್ಲಕಂಬ ಪ್ರದರ್ಶನ, ಯೋಗಾಸನ ಶಿಬಿರ, ವಿವಿಧ ಸ್ಪರ್ಧೆಗಳು

ಜ.16ರಂದು ಬೆಳಿಗ್ಗೆ 5.30 ರಿಂದ 7.30ರವರೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಯೋಗ ಶಿಬಿರ ನಡೆಯಲಿದೆ. ಈ ಶಿಬಿರ ಎಲ್ಲಾ ಮೂರು ದಿನಗಳ ಕಾಲ ಆಯೋಜನೆಯಾಗಿದೆ. ಯೋಗ ಶಿಬಿರದಲ್ಲಿ ಭಾಗವಹಿಸುವ ಎಲ್ಲ ಶಿಬಿರಾರ್ಥಿಗಳಿಗೂ ಉಚಿತವಾಗಿ ಯೋಗಾ ಮ್ಯಾಟ್, ಟೀ ಶರ್ಟ್ ಮತ್ತು ಕೊಡುಗೆ ನೀಡಲಾಗುವುದು. ಬೆಳಿಗ್ಗೆ 8 ಗಂಟೆಯಿಂದ 10 ಗಂಟೆಯವರೆಗೆ ನಗರದ ಎಲ್ಲಾ ವಾರ್ಡುಗಳಲ್ಲೂ ನಿಗಧಿತ ರಸ್ತೆಗಳಲ್ಲಿ ರಂಗೋಲಿ ಸ್ಪರ್ಧೆ ನಡೆಯಲಿದೆ. ಎಲ್ಲರಿಗೂ ಸಮಾಧಾನಕರ ಬಹುಮಾನ ನೀಡಲಾಗುವುದು. ಅಲ್ಲದೆ ತೀರ್ಪುಗಾರರು ಸಹ ವಿಜೇತರನ್ನು ಆಯ್ಕೆ ಮಾಡುತ್ತಾರೆ ಎಂದರು.

ಬೆಳಿಗ್ಗೆ 10 ಗಂಟೆಯಿಂದ 11 ಗಟೆಯವರಗೆ ಬಾಲಕಿರಯ ಸಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 16 ವರ್ಷ ಒಳಪಟ್ಟ ವಿದ್ಯಾರ್ಥಿಗಳಿಗೆ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೂ ಸಮಾಧಾನಕರ ಬಹುಮಾನ ನೀಡಲಾಗುವುದು. ಇನ್ನೊಂದೆಡೆ ಬೆಳಿಗ್ಗೆ 10 ಗಂಟೆಯಿಂದ ರಂಗಗೀತೆಗಳ ಸ್ಪರ್ಧೆ ನಡೆಯಲಿದೆ ತದ ನಂತರ ವಾಯ್ಸ್ ಆಫ್ ರಾಮನಗರ ಸ್ಪರ್ಧೆಯ ಮೂಲಕ ಉತ್ತಮ ಗಾಯಕರ ಆಯ್ಕೆ ನಡೆಯಲಿದೆ ಎಂದು ವಿವರಿಸಿದರು.

ಇದೇ ದಿನ ಸಂಜೆ 4 ಗಂಟೆಗೆ ಭಾರತೀಯ ಸಾಂಪ್ರದಾಯಿ ಉಡುಗೆ–ತೊಡುಗೆ ತೊಟ್ಟು ಪ್ರದರ್ಶಿಸುವ ದಂಪತಿಗಳಿಗೆ ಬಹುಮಾನ

ಇಂದು ಶ್ರೀರಾಮ ತಾರಕ ಯಜ್ಞ, ಯೋಗಾಸನ.

ಜ.15ರ ಬೆಳಿಗ್ಗೆ 8 ಗಂಟೆಯಿಂದ ನಗರದ ಬನ್ನಿಮಂಟಪದಲ್ಲಿ ಶ್ರೀರಾಮ ತಾರಕ ಯಜ್ಞ ನಡೆಯಲಿದ್ದು, ರಾಮೋತ್ಸವಕ್ಕೆ ಚಾಲನೆ ದೊರೆಯಲಿದೆ. 101 ಮಂದಿ ಪುರೋಹಿತರು ಈ ಯಜ್ಞವನ್ನು ನಡೆಸಿಕೊಡಲಿದ್ದಾರೆ ಎಂದು ಅವರು ತಿಳಿಸಿದರು.

ಶ್ರೀನಿವಾಸ ಕಲ್ಯಾಣೋತ್ಸವ

ಜ.17ರ ಸಂಜೆ ಜಿಲ್ಲಾ ಕ್ರೀಡಾಂಗಣದಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಅವರು ಈ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಜಿಲ್ಲಾ ಕ್ರೀಡಾಂಗಣದಲ್ಲಿ ತಿರುಪತಿ ಮಾದರಿಯ ದೇವಾಲಯವನ್ನು ತತ್ಕಾಲಿಕವಾಗಿ ಸ್ಥಾಪಿಸಲಾಗುವುದು. ಶ್ರೀನಿವಾಸ ಕಲ್ಯಾಣದ ನಂತರ ಶ್ರೀವೆಂಕಟೇಶ್ವರನನ್ನು ಮೂರು ದಿನಗಳ ಕಾಲ ದರ್ಶಿಸುವ ಅವಕಾಶ ಕಲ್ಪಿಸಲಾಗಿದೆ ಎಂದರು. ಇದೇ ದಿನ ಸಂಜೆ 7 ಗಂಟೆಯಿಂದ ಚಲನಚಿತ್ರಗೀತೆಗಳು, ದೇಶ ಭಕ್ತಿ ಗೀತೆಗಳು ಮತ್ತು ಜಾನಪದ ನೃತ್ಯವನ್ನು ಕಲಾವಿದರು ಪ್ರದರ್ಶಿಸಲಿದ್ದಾರೆ ಎಂದು ಅವರು ಮಾಹಿತಿ ಕೊಟ್ಟರು.

ಜ.17ರಂದು ಮ್ಯಾರಥಾನ್, ಸಾಧಕರಿಗೆ ಸನ್ಮಾನ

ಜ.17ರ ಶನಿವಾರಬೆಳಿಗ್ಗೆ 6 ಗಂಟೆಯಿಂದ 16 ವರ್ಷ ಮೇಲ್ಪಟ್ಟ ಎಲ್ಲರಿಗೂ 10 ಕಿಮಿ, 5 ಕಿಮಿ ಮ್ಯಾರಥಾನ್ ಏರ್ಪಡಿಸಿದೆ. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಮಾರ್ಗಗಳನ್ನು ನಿಗಧಿಪಡಿಸಲಾಗಿದೆ. ಮ್ಯಾರಥಾನ್‌ನಲ್ಲಿ ಭಾಗವಹಿಸುವ ಎಲ್ಲರಿಗೂ ಟಿ.ಶರ್ಟ್, ಮೆಡಲ್ ನೀಡ ಲಾಗುವುದು ಎಂದರು. ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ನಾಗರೀಕರು, ಪೌರಕಾರ್ಮಿ ಕರು, ಶ್ರಮಿಕರಿಗೆ ಹೀಗೆ 1200 ಮಂದಿಗೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. 4800ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರೇವೇರಿಸಲಾಗುವುದು ಎಂದು ಶಾಸಕ ಇಕ್ಬಾಲ್ ಹುಸೇನ್ ಮಾಹಿತಿ ಕೊಟ್ಟರು.

130 ಪಲ್ಲಕ್ಕಿಗಳಲ್ಲಿ 450 ದೇವತಾ ಮೂರ್ತಿಗಳ ಉತ್ಸವ

ಇದೇ ದಿನ 450ಕ್ಕೂ ಹೆಚ್ಚು ವಿವಿಧ ಗ್ರಾಮದೇವತೆಗಳ ಉತ್ಸವ ಮೂರ್ತಿಗಳನ್ನು 130ಕ್ಕೂ ಹೆಚ್ಚು ಪಲ್ಲಕ್ಕಿಗಳ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು. ಈ ವೇಳೆ ಎರಡು ಸಾವಿರ ಮಂದಿ ತಮಟೆ, ಡೊಳ್ಳು ಕಲಾವಿದರು ಭಾಗವಹಿಸುವರು.





ಜಿಲ್ಲಾ ಕ್ರೀಡಾಂಗಣದಲ್ಲಿ ಶ್ರೀ ವೆಂಕಟೇಶ್ವರ ದೇಗುಲ ನಿರ್ಮಾಣ

ರಾಮೋತ್ಸವದ ಅಂಗವಾಗಿ ತತ್ಕಾಲಿಕ ರಚನೆ ಜ.17ರಿಂದ ಮೂರು ದಿನಗಳ ಕಾಲ ಶ್ರೀನಿವಾಸನ ದರ್ಶನಕ್ಕೆ ಅವಕಾಶ

ರಾಮನಗರ: ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ರಾಮೋತ್ಸವದ ಅಂಗವಾಗಿ ಜ.17ರಂದು ಶ್ರೀನಿವಾಸ ಕಲ್ಯಾಣೋತ್ಸವ ಆಯೋಜನೆಯಾಗಿದ್ದು, ತಿರುಪತಿ ತಿರುಮಲೆಯ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದ ಪ್ರತಿರೂಪವನ್ನು ಸೃಜಿಸಲಾಗಿದೆ.

ತತ್ಕಾಲಿಕವಾಗಿ ಸ್ಥಾಪನೆಯಾಗಿರುವ ಈ ಕೃತಕ ದೇವಾಲಯದಲ್ಲಿ ಶ್ರೀನಿವಾಸ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು. ಜ.17ರಂದು ಸಂಜೆ ಶ್ರೀನಿವಾಸ ಕಲ್ಯಾಣೋತ್ಸವದ ನಂತರ ಮೂರು ದಿನಗಳ ಕಾಲ ತಿರುಪತಿ ಗಿರಿವಾಸನನ್ನು ದರ್ಶಿಸಲು ಭಕ್ತರಿಗೆ ಅವಕಾಶ ಮಾಡಿಕೊಡಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಅವರು ಶ್ರೀನಿವಾಸ ಕಲ್ಯಾಣೋತ್ಸವಕ್ಕೆ ಚಾಲನೆ ನೀಡುವರು. ಕಲ್ಯಾಣೋತ್ಸವಕ್ಕೆ ಸಾಕ್ಷಿಯಾಗುವ ಭಕ್ತರೆಲ್ಲರಿಗೂ ತಿರುಪತಿ ಲಡ್ಡುಗಳನ್ನು ಪ್ರಸಾದವಾಗಿ ವಿತರಿಸಲಾಗುವುದು. ಜ.19ರಂದು ತಿರುಪತಿ ಲಡ್ಡುಗಳನ್ನು ಕಾರ್ಯಕರ್ತರು ಪ್ರತಿ ಮನೆಗೂ ತಲುಪಿಸುವರು ಎಂದು ರಾಮೋತ್ಸವದ ಆಯೋಜಕ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದ್ದಾರೆ.

ಆಲೂರು ಹೊಮ್ಮ ಗ್ರಾಮದಲ್ಲಿ ಚಿರತೆ ಸಾವು



ಚಾಮರಾಜನಗರ, ತಾಲೂಕಿನ ಆಲೂರು ಹೊಮ್ಮ ಗ್ರಾಮದ ಜಮೀನೊಂದರಲ್ಲಿ ಚಿರತೆ ಮೃತಪಟ್ಟಿದೆ

ಕಳೆದ ಒಂದು ವರ್ಷದಿಂದ ಆಗಾಗ ಕಾಣಿಸಿಕೊಂಡು ಮೇಕೆ ಎಳೆದೊಯ್ಯುವುದು,, ಹಸು ಬಲಿ ತೆಗೆದುಕೊಂಡು ಜನರಲ್ಲಿ ಭಯ ಮೂಡಿಸಿದ್ದ ಚಿರತೆ ಮೃತಪಟ್ಟಿದೆ. ಸ್ಥಳಕ್ಕೆ ಬಿ.ಆರ್.ಟಿ ಅರಣ್ಯ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ ಮುಂದಿನಕ್ರಮ ಕೈಗೊಂಡಿದ್ದಾರೆ.

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಎಸ್.ಬಿ.ಎಂ.ಮಂಜುರನ್ನು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಸನ್ಮಾನಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎ.ಮಂಚಪ್ಪ, ಆರ್.ಸೋಮಣ್ಣ, ಎನ್. ಯೋಗಾನಂದ್, ವಸಂತ ಮುನೀಷ್, ಸಿ.ಚಂದ್ರಶೇಖರ್, ರಾಜೇಶ್ವರಿ, ಹರೀಶ್, ವಿಕಾಸ್, ಸಿ.ಎಸ್.ರಾಮಕೃಷ್ಣಯ್ಯ, ರಮೇಶ್ ಗೌಡ, ಕಾರ್ಯದರ್ಶಿ ಹರ್ಷಿತ್ ಗೌಡ ಇದ್ದಾರೆ.

ಮೈಸೂರಿನ ಶಾಸಕ ಕೆ.ಹರೀಶ್ ಗೌಡರ ಪೋಷಕರ ಹೆಸರಿನ ಶ್ರೀ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ 2026ನೇ ಸಾಲಿನ ನೂತನ ಕ್ಯಾಲೆಂಡರ್ ಅನ್ನು ಜಲದರ್ಶಿನಿ ಕಚೇರಿಯಲ್ಲಿ ಅನಾವರಣಗೊಳಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ನಗರ ಅಧ್ಯಕ್ಷ ಆರ್.ಮೂರ್ತಿ, ಕ್ಷೇತ್ರದ ಬ್ಲಾಕ್ ಅಧ್ಯಕ್ಷರಾದ ರವಿ ಮಂಚೇಗೌಡನ ಕೊಪ್ಪಲು, ಡಿ.ನಾಗಭೂಷಣ್ ಇತರರು ಭಾಗವಹಿಸಿದ್ದರು.

ನೂತನ ಡಿಸಿ ಶ್ರೀರೂಪ ಅವರಿಗೆ ಸನ್ಮಾನ

ಚಾಮರಾಜನಗರ: ನೂತನ ಜಿಲ್ಲಾಧಿಕಾರಿಯಾದ ಶ್ರೀರೂಪ ಅವರನ್ನು ಎಪಿಎಂಸಿ ಅಧ್ಯಕ್ಷ ಮುತ್ತಿಗೆ ಗುರುಸ್ವಾಮಿ ಸನ್ಮಾನಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಹೂ ಗುಚ್ಛ ನೀಡಿ ಮಕರ ಸಂಕ್ರಾಂತಿ ಹಬ್ಬದ ಶುಭಾಶಯ ಕೋರಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರ ನಾಗರಾಜು ಮೂರ್ತಿ, ನಗರಸಭಾ ಸದಸ್ಯ ಎಂ.ಸ್ವಾಮಿ, ತಾಲೂಕು ಪಂಚಾಯತಿ ಕೆಡಿಪಿ ಸದಸ್ಯ ಕಾಗಲವಾಡಿಮೋಳೆ ಶ್ರೀನಿವಾಸ್, ಬೀರಲಿಂಗೇಶ್ವರ ದೇವಸ್ಥಾನ ಅಧ್ಯಕ್ಷ ಆರ್. ಮಹದೇವ್. ಜವರೇಗೌಡರು. ವಿಷಕಂಠ ಇತರರು ಹಾಜರಿದ್ದರು.

ನೂತನ ದಿನದರ್ಶಿಕೆ ಬಿಡುಗಡೆ

ಮೈಸೂರು: ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳ ಉತ್ಪನ್ನ ಹಾಗೂ ಮಾರಾಟ ಸಹಕಾರ ಸಂಘ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಯಿತು.

ಬಳಿಕ ರಾಜ್ಯಾಧ್ಯಕ್ಷ ಆರ್.ಮಂಜುನಾಥ್ ಮಾತನಾಡಿ, ಈ ವೇಳೆ ಆರ್. ಮಂಜುನಾಥ್ ಮಾತನಾಡಿ, ಸಹಕಾರ ಸಂಘದಲ್ಲಿ ಎರಡನೇ ಬಾರಿಗೆ ಅವಿರೋಧ ಆಯ್ಕೆ ನಡೆದಿರುವುದು ಸಂತಸದ ವಿಷಯವಾಗಿದೆ. ಈ ವರ್ಗಗಳ ಉದ್ದಿಮೆದಾರರ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿ, ಉದ್ದಿಮೆ ನಡೆಸುವ ವೇಳೆ ಎದುರಾಗುವ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸಂಘ ಕೆಲಸ ಮಾಡುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸಿಗುವ ಸವಲತ್ತು ದೊರಕಿಸಿಕೊಡುವುದು, ಅವುಗಳ ಬಗ್ಗೆ ಅರಿವು ಮೂಡಿಸಲು ಶ್ರಮಿಸುತ್ತಿದೆ ಎಂದರು. ಈ ವರ್ಗಗಳಿಗೆ ಸೇರಿದ್ದು, ಜಿಎಸ್ಟಿ ನೋಂದಣಿ ಮಾಡಿಸಿಕೊಂಡಿರುವವರು ಷೇರು ಹಣ ಪಾವತಿಸಿ ಸದಸ್ಯರಾಗಬಹುದಾಗಿದೆ. ಇವರು ಉತ್ತಮ ಉದ್ದಿಮೆದಾರರಾಗಲು ಸಂಘ ನೆರವಾಗಲಿದೆ ಎಂದರು. ನಿರ್ದೇಶಕ ಈಶ್ವರ್ ಚಕ್ಕಡಿ, ಪದಾಧಿಕಾರಿಗಳಾದ ಬಿ.ಧರಣೇಂದ್ರ, ಲಚಮಪ್ಪ ನಾಯ್ಕ, ಹೊನ್ನಯ್ಯ, ಬಿ.ಕಲಾವತಿ, ಡಾ.ಶೋಭಾ ಮೊದಲಾದವರು ಇದ್ದರು.

ವಿಜಯೇಂದ್ರ ಅಂಗಳ ತಲುಪಿದ ಚಾಮರಾಜ ಕಲಹ

ಮೈಸೂರು: ಚಾಮರಾಜ ವಿಧಾನ ಸಭಾ ಕ್ಷೇತ್ರದ ಮುಂಬರುವ ಚುನಾವಣೆಯ ಅಭ್ಯರ್ಥಿ ವಿಚಾರವಾಗಿ ನಡೆದಿರುವ ಕಲಹ ವಿಚಾರವನ್ನು ಪ್ರಸ್ತಾಪಿಸುವ ಮೂಲಕ ಕಮಲ ಕಲಹ ಈಗ ರಾಜ್ಯಾಧ್ಯಕ್ಷ ಅಂಗಳ ತಲುಪಿದೆ.

ನಟ ಹಾಗೂ ಬಿಜೆಪಿ ಚಾಮರಾಜ ವಿಧಾನ ಸಭಾ ಕ್ಷೇತ್ರದ ಆಕಾಂಕ್ಷಿಯಾದ ಜಯಪ್ರಕಾಶ್ (ಜೆಪಿ) ಚಾಮಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ.ವಿಜಯೇಂದ್ರರನ್ನು ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಭೇಟಿ ಮಾಡಿದ್ದಾರೆ. ಮಾತ್ರವಲ್ಲದೆ, ಟಿಕೇಟ್ ವಿಚಾರವಾಗಿ ಕಾರ್ಯಕರ್ತರು ಗುಂಪುಗಳಾಗಿ ಒಬ್ಬೊಬ್ಬರ ಪರವಾಗಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದರಿಂದ ಪಕ್ಷದ ವರ್ಚಸ್ಸಿಗೆ ದಕ್ಕೆ ಯಾಗುತ್ತಿರುವ ಹಿನ್ನೆಲೆಯಲ್ಲಿ ತಾವು ಶಿಸ್ತು ಸಮಿತಿಯ ನೆರವಿನಿಂದ ಮಧ್ಯಪ್ರವೇಶಿಸಿ ಎಲ್ಲರಿಗೂ ಬುದ್ಧಿವಾದ ಹೇಳಿ ಪಕ್ಷದ ಕಾರ್ಯಕರ್ತರಲ್ಲಿ ಒಗ್ಗಟ್ಟು ಮತ್ತು ಪ್ರೀತಿ ವಿಶ್ವಾಸ ಬೆಳೆಯುವಂತೆ ಮಾಡುವಂತೆಯೂ ಮನವಿ ಮಾಡಿದ್ದಾರೆ. ಅಲ್ಲದೆ, ಚುನಾವಣೆ ಇನ್ನೂ ದೂರವಿರುವುದರಿಂದ ಉಮೆದಾರಿಕೆ ಬಗ್ಗೆ ಈಗಲೇ ಚರ್ಚಿಸುವ ಮತ್ತು ಲಾಭ ಮಾಡುವ ಅವಶ್ಯಕತೆ ಇಲ್ಲವಾಗಿರುವ ಹಿನ್ನೆಲೆಯಲ್ಲಿ ನಾಯಕರಿಗೆ ಬುದ್ಧಿ ಹೇಳಿ ಮತ್ತಷ್ಟು ಕ್ಷೇತ್ರದಲ್ಲಿ ಪಕ್ಷದ ವಾತಾವರಣ ಸೃಷ್ಟಿಸುವಂತೆ ಕೋರಿದ್ದಾರೆ.

ಕ್ಯಾಲೆಂಡರ್ ಬಿಡುಗಡೆ, ಸಾಧಕರಿಗೆ ಸನ್ಮಾನ

ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಅಸ್ತ್ರ: ಎನ್.ಮಹೇಶ್

ಚಾಮರಾಜನಗರ, ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಅಸ್ತ್ರವಾಗಿದೆ ಎಂದು ಕೆಇಬಿ ಲೆಕ್ಕಾಧಿಕಾರಿ ಎನ್.ಮಹೇಶ್ ಹೇಳಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಕಚೇರಿಯಲ್ಲಿ ನಡೆದ ಜಿಲ್ಲಾ ಉಪ್ಪಾರ ಯುವಕರ ಸಂಘದ 8ನೇ ವರ್ಷದ ವಾರ್ಷಿಕೋತ್ಸವ, 2026 ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಎಲ್ಲ ಸಮುದಾಯಗಳು ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬಂದಿವೆ. ಉಪ್ಪಾರ ಸಮುದಾಯದಲ್ಲಿ ಕೃಷಿಕರು ಸರ್ಕಾರಿ ನೌಕರರು ವಿರಳ. ಸಣ್ಣಪುಟ್ಟ ವ್ಯಾಪಾರ, ಕೂಲಿ ಮಾಡುತ್ತಿರುವ ಸಮುದಾಯ ಮೇಲೆ ಬರಲು ಶಿಕ್ಷಣವೇ ಅಸ್ತ್ರವಾಗಿರುವುದರಿಂದ ಪ್ರತಿಯೊಬ್ಬರೂ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಹರದನಹಳ್ಳಿಯ ಗಡಿಯಜಮಾನರಾದ ಜಯಸ್ವಾಮಿ ಮಾತನಾಡಿ, ಸಮುದಾಯದವರು ಮೌಢ್ಯದಿಂದ ದೂರವಿರಬೇಕು.ಬಾಲ್ಯವಿವಾಹ ತಡೆಗಟ್ಟಿ ಶಿಕ್ಷಣ ಕೊಡಿಸಬೇಕು ಎಂದರು.

ಸಂಘ ಅಧ್ಯಕ್ಷ ಜಯಕುಮಾರ್ ಮಾತನಾಡಿ, ಪ್ರತಿವರ್ಷದಂತೆ ಈ ವರ್ಷವೂ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆ, ಸಮುದಾಯದ ಸಾಧಕರನ್ನು ಸನ್ಮಾನಿಸಲಾಗಿದೆ. ಸಮುದಾಯ ಪ್ರತಿಭಾವಂತ ವಿದ್ಯಾರ್ಥಿಗಳು, ಅಧಿಕಾರಿಗಳನ್ನು, ಸಾಧಕರನ್ನು ಗುರುತಿಸಿ ಸನ್ಮಾನಿಸಿ ಪ್ರೋತ್ಸಾಹಿಸಿಕೊಂಡು ಬರಲಾಗಿದೆ ಎಂದರು.ಅಯ್ಯನ ಸರಗೂರು ಮಠದ ಶ್ರೀ ಮಹದೇವಸ್ವಾಮಿ ಸ್ವಾಮೀಜಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಆರ್ಶೀವಚನ ನೀಡಿದರು.

ಸನ್ಮಾನ

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಬಸವರಾಜು, ಯಳಂದೂರು ತಾಲೂಕು ಅಧ್ಯಕ್ಷ ನಾಗರಾಜು, ಪತ್ರಕರ್ತ ಮಂಜುಕುಮಾರ್, ಪರಿಸರಪ್ರೇಮಿ ಸಿ.ಎಂ.ವೆಂಕಟೇಶ್, ಡಾ. ಗಿರಿದರ್ಶನ್, ಶಿಕ್ಷಕ ರಾಜು, ಎಎಸ್ಐ ಗಳಾದ ಬಂಗಾರು, ಮಂಜುನಾಥ್ ಇತರರು ಸನ್ಮಾನಿಸಲಾಯಿತು

ಚಾಮರಾಜನಗರ ಸರ್ಕಾರಿ ಐಟಿಐ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಟಿ.ಎ.ರಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಂಶುಪಾಲ ಎಂ ಸೋಮಣ್ಣ ಕಾರ್ಯಕ್ರಮದಲ್ಲಿ ಜಿಲ್ಲಾ ಉಪ್ಪಾರ ಯುವಕರ ಸಂಘದ ಉಪಾಧ್ಯಕ್ಷ ಬಿ.ಸ್ವಾಮಿ, ಪ್ರಧಾನ ಕಾರ್ಯದರ್ಶಿ ಸಿ.ಎಸ್.ನಾಗರಾಜು, ಶಿವಕುಮಾರ್ ಕೆ.ಮಹದೇವ ಸ್ವಾಮಿ, ಕೂಡ್ಲೂರು ಮಹೇಶ್ ಶ್ರೀನಿವಾಸ, ಯ.ಜಯಸಿದ್ದು ,ಯ.ಮಹದೇವಶೆಟ್ಟಿ, ಮರಿಸ್ವಾಮಿ, ಪ್ರಕಾಶ್, ಜವರಪ್ಪ ಹಾಜರಿದ್ದರು.

15 January 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಹಬ್ಬ ,ಹರಿದಿನಗಳು ನಮ್ಮನ್ನು ಶಿಸ್ತಿನಲ್ಲಿ ಬಂಧಿಸಿಡುತ್ತವೆ! ಏಕೆಂದರೆ ಆ ದಿನ ನಾವು ಸಮಯಕ್ಕೆ ತಕ್ಕ ಹಾಗೆ ಪರಿಪೂರ್ಣತೆಯಿಂದ ಕೆಲಸಗಳನ್ನು ಮಾಡಿಕೊಳ್ಳುತ್ತೇವೆ!

info.varthaman@gmail.com

ಒಂದೊಳ್ಳೆ ಮಾತು

ಒಬ್ಬ ಮನುಷ್ಯ ಯಶಸ್ವಿಯಾಗುವುದಕ್ಕೆ ಮುಖ್ಯವಾಗಿ ಆತ ಜೀವನಪೂರ್ತಿ ವಿದ್ಯಾರ್ಥಿ ಆಗಿರಬೇಕು ಪ್ರತಿದಿನ ಕುತೂಹಲಕಾರಿಯಾಗಿ ಬೇಕು ಮತ್ತು ಹೊಸದನ್ನು ಕಲಿಯುತ್ತಿರಬೇಕು

ಮೈಲಾರ ಸಾವಿತ್ರಿಬಾಯಿ

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 76 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

ಜೈಲು ಸುಧಾರಣೆ ಸಮಿತಿ ವರದಿ

ಗೃಹ ಸಚಿವ ಜಿ.ಪರಮೇಶ್ವರ್‌ಗೆ ಸಲ್ಲಿಕೆ ಸಿದ್ದರಾಮಯ್ಯ ಜೊತೆ ಚರ್ಚೆ

ಬೆಂಗಳೂರು: ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಆರ್.ಹಿತೇಂದ್ರ ನೇತೃತ್ವದ ಕರ್ನಾಟಕ ಜೈಲು ಸುಧಾರಣೆಗಳ ಕುರಿತ ಉನ್ನತ ಮಟ್ಟದ ಸಮಿತಿ ಬುಧವಾರ ಗೃಹ ಸಚಿವ ಜಿ.ಪರಮೇಶ್ವರ್ ಅವರಿಗೆ ವರದಿ ಸಲ್ಲಿಸಿದೆ.

ರಾಜ್ಯದ ಜೈಲುಗಳ ಕಾನೂನುಬಾಹಿರ ಚಟುವಟಿಕೆಗಳು, ಭದ್ರತಾ ಕ್ರಮಗಳು ಮತ್ತು ಸುಧಾರಣಾ ಕ್ರಮಗಳನ್ನು ಒಳಗೊಂಡಿರುವ ಸಮಿತಿಯ ಶಿಫಾರಸುಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಲಾಗುವುದು ಪುಟ 4ಕ್ಕೆ

ಮಹಾದಾಸೋಹಕ್ಕೆ ಚಾಲನೆ....... ಸುತ್ತೂರು ಶ್ರೀ ಶಿವರಾತ್ರೀಶ್ವರರ ಜಾತ್ರೆ ಅಂಗವಾಗಿ ನಡೆಯುವ ಮಹಾ ದಾಸೋಹಕ್ಕೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬುಧವಾರ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಗುರುವಾರದಿಂದ 6 ದಿನಗಳ ಕಾಲ ಜಾತ್ರೆ ನಡೆಯಲಿದೆ. ಸುಮಾರು 25 ಲಕ್ಷ ಭಕ್ತರಿಗೆ ಶ್ರೀಮಠದಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಲಕ್ಷ ದೀಪೋತ್ಸವ ಸಂಭ್ರಮ.... ಮೈಸೂರಿನ ಚಾಮುಂಡಿ ಬೆಟ್ಟದ ಪಾದದಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಸಂಕ್ರಾಂತಿ ಅಂಗವಾಗಿ ಬುಧವಾರ ವಿಜೃಂಭಣೆಯಿಂದ ಲಕ್ಷ ದೀಪೋತ್ಸವ ನಡೆಯಿತು.

ನಮ್ಮ ನಾಯಕರ ಜೊತೆಗಿನ ಮಾತುಕತೆ ಬಹಿರಂಗ ಮಾಡಲ್ಲ: ಡಿ.ಕೆ.ಶಿವಕುಮಾರ್

ಬೆಂಗಳೂರು: ನಮ್ಮ ಪಕ್ಷದ ನಾಯಕರ ಜೊತೆ ನಡೆದಿರುವ ಮಾತುಕತೆ ಬಗ್ಗೆ ಬಹಿರಂ ಗವಾಗಿ ಚರ್ಚೆ ಮಾಡುವು ದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದ ಆವರಣದಲ್ಲಿ ಬುಧವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿ ಕ್ರಿಯೆ ನೀಡಿದರು. ನಾನು ಕೆಪಿಸಿಸಿ ಅಧ್ಯಕ್ಷ, ರಾಹುಲ್ ಗಾಂಧಿ ಅವರು ಲೋಕಸಭೆ ವಿರೋಧ ಪಕ್ಷದ ನಾಯಕ. ಶಿಷ್ಟಾಚಾರದ ಪ್ರಕಾರ ಅವರನ್ನು ಸ್ವಾಗತಿಸಿ, ಭೇಟಿ ಮಾಡಿದ ವಿಚಾರವನ್ನು ಸಾರ್ವಜನಿಕವಾಗಿ ಚರ್ಚೆ ಮಾಡಲು ಸಾಧ್ಯವೇ? ನೀವುಗಳು ನಿಮಗೆ ಇಚ್ಛೆ ಬಂದಂತೆ ಗೊಂದಲ ಸೃಷ್ಟಿಸಿಕೊಳ್ಳುತ್ತಿದ್ದೀರಿ ಎಂದರು.

ನೀವು ಅವರಿವರ ಮಾತು ಕೇಳಿ ನಿಮ್ಮ ಚಾನೆಲ್‌ಗಳು ಹೊಂದಿರುವ ಗೌರವ ಕಳೆದುಕೊಳ್ಳುತ್ತಿದ್ದೀರಿ. ನಾವು ಯಾವ ಸಂದೇ ಶವನ್ನೂ ಕೊಟ್ಟಿಲ್ಲ. ನಾಯಕರು ನಮಗೂ ಯಾವ ಸಂದೇಶವನ್ನೂ ಕೊಟ್ಟಿಲ್ಲ. ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ, ಇದನ್ನೇ ಮುಂದು ವರಿಸಿಕೊಂಡು ಹೋಗಿ ಎಂದು ನಮ್ಮ ನಾಯ ಕರು ಹೇಳಿದ್ದಾರೆ. ನರೇಗಾ ವಿಚಾರವಾಗಿ ನಾವು ಮಾಡುತ್ತಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದ್ದೇನೆ. ರಾಜ್ಯ ಬಿಜೆಪಿಯಲ್ಲಿ ಆಗುತ್ತಿರುವ ರಾಜಕಾರಣ ಚರ್ಚೆ ಮಾಡಿದ್ದೇವೆ ಎಂದು ಸ್ಪಷ್ಟಪಡಿಸಿದರು. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ವಾಗುವುದಿಲ್ಲ ಎಂಬ ಟ್ವೀಟ್ ವಿಚಾರವಾಗಿ ಕೇಳಿದಾಗ, ನಾನು ಹೊಸದಾಗಿ ಈ ಮಾತನ್ನು ಹೇಳುತ್ತಿಲ್ಲ. ಒಕ್ಕಲಿಗ ಉದ್ಯಮಿ ಕಾರ್ಯಕ್ರಮಕ್ಕೆ ಹೋಗಿದ್ದಾಗ ನಾನು ಅಲ್ಲಿನ ಉದ್ಯಮಿಗಳ ಜೊತೆ ನನ್ನ ಅನುಭವದ ಮಾತುಗಳನ್ನು ಹೇಳಿಕೊಂಡಿದ್ದೇನೆ ಎಂದರು.

ದೆಹಲಿಗೆ ತೆರಳುತ್ತಿದ್ದೀರಾ ಎಂಬ ಪ್ರಶ್ನೆಗೆ, ಜ.16ರಂದು ದೆಹಲಿಗೆ ತೆರಳುತ್ತಿದ್ದೇನೆ. ಅಸ್ಸಾಂನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಪೂರ್ವಸಿದ್ಧತಾ ಸಭೆಯಲ್ಲಿ ಭಾಗವಹಿಸಲು ಶಿವಕುಮಾರ್ ದೆಹಲಿಗೆ ತೆರಳಲಿದ್ದಾರೆ.

ರಾಜ್ಯದ ಸಮಸ್ಯೆಗಳ ಚರ್ಚೆ

ಬೆಂಗಳೂರು: ಮುಂಬರುವ ಸಂಸತ್ ಅಧಿವೇಶನದಲ್ಲಿ ರಾಜ್ಯದ ಸಮಸ್ಯೆಗಳು ಬಗ್ಗೆ ಚರ್ಚೆ ಮಾಡುವ ಬಗ್ಗೆ ಸಿಎಂ– ಡಿಸಿಎಂ ಜೊತೆ ರಾಹುಲ್ ಗಾಂಧಿ ಚರ್ಚೆ ಮಾಡಿದ್ದಾರೆ ಎಂದು ಸಚಿವ ಶರಣು ಪ್ರಕಾಶ್ ಪಾಟೀಲ್ ತಿಳಿಸಿದರು.

ರಾಹುಲ್ ಗಾಂಧಿ ಜೊತೆ ಸಿಎಂ–ಡಿಸಿಎಂ ಮಾತು ಕತೆ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ರಾಹುಲ್ ಗಾಂಧಿ ಲೋಕಸಭೆ ವಿಪಕ್ಷ ನಾಯ ಕರು. ಜನ ವರಿ 28ರಿಂದ ಬಜೆಟ್ ಅಧಿವೇಶನ ಶುರು ವಾಗುತ್ತದೆ. ರಾಜ್ಯದ ಅನೇಕ ವಿಷಯಗಳ ಬಗ್ಗೆ ಸಂಸ ತ್‌ನಲ್ಲಿ ಚರ್ಚೆ ಆಗಬೇಕು. ಈ ವಿಚಾರಗಳ ಬಗ್ಗೆ ರಾಹುಲ್ ಗಾಂಧಿ ಜೊತೆ ಸಿಎಂ ಮಾತಾಡಿದ್ದಾರೆ. ಅಲ್ಲಿ ರಾಜಕೀಯ ಮಾತಾಡಿರೋ ಬಗ್ಗೆ ನನಗೆ ಗೊತ್ತಿಲ್ಲ ಎಂದರು.

ಡಿಕೆಶಿ ಪ್ರಾರ್ಥನೆ ಫಲಿಸಿತೇ?

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ನಡೆ ಯುತ್ತಿರುವ ಹೋರಾಟಕ್ಕೆ ಪುಷ್ಟಿ ನೀಡುವ ರೀತಿಯಲ್ಲಿ ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ಮತ್ತೆ ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದು ಪೋಸ್ಟ್ ಹಾಕಿದ್ದಾರೆ. ಈ ಮಾತನ್ನು ಡಿ.ಕೆ.ಶಿವಕುಮಾರ್ ಈ ಹಿಂದೆ ಕೂಡ ಸಾಕಷ್ಟು ಬಾರಿ ಹೇಳಿದ್ದರು.

ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಬಂದ ನಂತರ ಪೋಸ್ಟ್ ಹಾಕಿರುವ ಹಿನ್ನೆಲೆಯಲ್ಲಿ ಇದು ಕುತೂಹಲಕ್ಕೆ ಕಾರಣವಾ ಗಿದೆ. ರಾಹುಲ್ ಭೇಟಿ ಫಲಪ್ರದವಾಗಿದೆಯೇ ಎಂಬ ಪ್ರಶ್ನೆ ಬಂದಿದೆ. ರಾಹುಲ್ ಅವರು ತಮಿಳುನಾಡಿಗೆ ಕಾರ್ಯಕ್ರಮಕ್ಕೆ ಹೋಗುವ ಮಧ್ಯೆ ಮೈಸೂರಿನಲ್ಲಿ ಸಿಎಂ ಮತ್ತು ಡಿಸಿಎಂ ಅವರನ್ನು ಭೇಟಿ ಮಾಡಿ ಪ್ರತ್ಯೇಕವಾಗಿ ಚರ್ಚಿಸಿದ್ದರು. ಇಬ್ಬರೂ ನಾಯಕರ ಜೊತೆ ಕೆಲವು ನಿಮಿಷಗಳ ಕಾಲ ಪ್ರತ್ಯೇಕವಾಗಿ ರಾಹುಲ್ ಗಾಂಧಿ ಮಾತನಾಡಿದ್ದರೆ, ಒಟ್ಟಿಗೆ ಒಂದೆರಡು ನಿಮಿಷಗಳ ಕಾಲ ಭೇಟಿಯಾದರು.

ಸಿಎಂ, ಡಿಸಿಎಂಗೆ ಬುಲಾವ್

ದೆಹಲಿಯಲ್ಲಿ ಗೊಂದಲ ಇತ್ಯರ್ಥ । ಅಶೋಕ್ ಪಟ್ಟಣ್

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಮಾತುಕತೆಗೆ ದೆಹಲಿಗೆ ಬರುವಂತೆ ಆಹ್ವಾನಿಸಿದ್ದಾರೆ. ಶೀಘ್ರವೇ ಎಲ್ಲಾ ಗೊಂದಲ ದೆಹಲಿಯಲ್ಲಿ ಇತ್ಯರ್ಥ ಆಗಲಿದೆ ಎಂದು ವಿಧಾನಸಭೆ ಸರ್ಕಾರದ ಮುಖ್ಯ ಸಚೇತಕ ಅಶೋಕ್ ಪಟ್ಟಣ್ ತಿಳಿಸಿದರು.

ನಿನ್ನೆ ಸಿಎಂ–ಡಿಸಿಎಂ ಜೊತೆ ರಾಹುಲ್ ಗಾಂಧಿ ಜೊತೆ ಚರ್ಚೆ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ನಿನ್ನೆ ಏನು ಮಾತುಕತೆ ಆಗಿಲ್ಲ ಇಬ್ಬರಿಗೂ ರಾಹುಲ್ ದೆಹಲಿಗೆ ಬರೋಕೆ ಹೇಳಿದ್ದಾರೆ. ದೆಹಲಿಗೆ ಹೋದ ಮೇಲೆ ಎಲ್ಲವೂ ಸರಿ ಮಾಡ್ತೀವಿ ಅಂತ ಹೇಳಿದ್ದಾರೆ. ಡಿಕೆಶಿ, ಸಿದ್ದರಾಮಯ್ಯ ಇಬ್ಬರನ್ನು ದೆಹಲಿಗೆ ಕರೆದಿದ್ದಾರೆ. ಡಿಕೆಶಿ ಮಾತಾಡಬೇಕು ಅಂತ ಕೇಳಿದರು.

ಆಗ ಇಬ್ಬರು ದೆಹಲಿಗೆ ಬನ್ನಿ ಅಂದರು. ಸಂಕ್ರಾಂತಿ ಬಳಿಕ ಕರೆಯಬಹುದು. ಇಬ್ಬರು ದೆಹಲಿಗೆ ಹೋಗ್ತಾರೆ ಎಂದು ತಿಳಿಸಿದರು. ಪುಟ 4ಕ್ಕೆ



ಮೃತ ಯೋಧ ಮಾದೇಗೌಡ ಅವರ ಪಾರ್ಥೀವ ಶರೀರಕ್ಕೆ ಜಿಲ್ಲಾಡಳಿತದಿಂದ ಗೌರವ ಸಲ್ಲಿಸಲಾಯಿತು.

ಹೃದಯಾಘಾತದಿಂದ ಯೋಧ ಸಾವು

ಮಂಡ್ಯ: ಮಹಾರಾಷ್ಟ್ರದ ಚಾಕೋರು ಜಿಲ್ಲೆಯ ಲಾತೂರ್‌ನ ಬಿಎಸ್‌ಎಫ್ ತರಬೇತಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಂಡ್ಯದ ಯೋಧ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ನಗರದ ತಾವರೆಗೆರೆ ಬಡಾವಣೆಯ ಎಂ.ಬಿ. ಮಾದೇಗೌಡ (44) ಮೃತ ಯೋಧ. ಕರ್ತವ್ಯದ ಸಮಯದಲ್ಲಿ ಹೃದಯಾಘಾತದಿಂದ ಯೋಧ ಮೃತಪಟ್ಟಿದ್ದಾರೆ. ಮಾದೇಗೌಡ 2000ರಲ್ಲಿ ಮೈಸೂರಿನಲ್ಲಿ ನಡೆದ ಬಿಎಸ್‌ಎಫ್ ಸೇನಾ ನೇಮಕಾತಿಯಲ್ಲಿ ಆಯ್ಕೆಯಾಗಿದ್ದರು. ಕಳೆದ 25 ವರ್ಷಗಳಲ್ಲಿ ದೇಶದ ಹಲವೆಡೆ ಸೇವೆ ಸಲ್ಲಿಸಿದ್ದರು.

ಯೋಧನ ಮೃತದೇಹ ಬುಧವಾರ ಮಂಡ್ಯಕ್ಕೆ ಆಗಮಿಸಿತು. ಜಿಲ್ಲಾ ಸಶಸ್ತ್ರ ಮೀಸಲು ಪಡೆ ಮೈದಾನದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಿತು. ಶಾಸಕ ಗಣಿಗ ರವಿಕುಮಾರ್, ಡಿಸಿ ಡಾ. ಕುಮಾರ, ಎಸ್ಪಿ ಶೋಭಾರಾಣಿ ಗೌರವ ನಮನ ಸಲ್ಲಿಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದರು.

ಮೃತ ಯೋಧ ಮಾದೇಗೌಡ

ಬಳ್ಳಾರಿ ನಂತರ ಶಿಡ್ಲಘಟ್ಟದಲ್ಲಿಯೂ ಪುರಸಭೆಗೆ ಬೆಂಕಿ ಹಚ್ಚುವ ಬೆದರಿಕೆ

ಮುಖ್ಯಾಧಿಕಾರಿಗೆ ಅಶ್ಲೀಲವಾಗಿ ನಿಂದಿಸಿ ಕೈ ನಾಯಕನ 'ದಾದಾಗಿರಿ'

ಚಿಕ್ಕಬಳ್ಳಾಪುರ: ಶಿಡ್ಲಘಟ್ಟದಲ್ಲಿ ಅಕ್ರಮವಾಗಿ ಹಾಕಿದ್ದ ಬ್ಯಾನರ್‌ಗಳನ್ನು ತೆರವುಗೊಳಿಸಿದ ಪುರಸಭೆ ಮುಖ್ಯಾಧಿಕಾರಿ ಅಮೃತಾ ಅವರಿಗೆ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ.

ವಕ್ಫ್ ಸಚಿವ ಜಮೀರ್ ಅಹ್ಮದ್ ಪುತ್ರ ಝೈದ್ ಖಾನ್ ಅಭಿನಯದ ಕಲ್ಟ್ ಸಿನಿಮಾದ ಅಕ್ರಮವಾಗಿ ಹಾಕಿದ್ದ ಬ್ಯಾನರ್ ತೆರವುಗೊಳಿಸಿದ್ದಕ್ಕೆ ಪೌರಾಯುಕ್ತೆ ಅಮೃತಾ ಗೌಡಗೆ ಕರೆ ಮಾಡಿದ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅಶ್ಲೀಲವಾಗಿ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾನೆ. ಅಲ್ಲದೆ, ಸಾರ್ವಜನಿಕವಾಗಿ ಚಪ್ಪಲಿಯಿಂದ ಹೊಡೆಸುವುದಾಗಿ ಬೆದರಿಕೆ ಹಾಕಿದ್ದಾನೆ.

ಬ್ಯಾನರ್ ತೆಗೆಸಿದವರಿಗೆ ಚಪ್ಪಲಿಯಲ್ಲಿ ಹೊಡೆಸಿ ನಗರಸಭೆಗೆ ಬೆಂಕಿ ಹಾಕಿಸುತ್ತೇನೆ. ದಂಗೆ ಮಾಡಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ. ಅಲ್ಲದೆ, ಶಿಡ್ಲಘಟ್ಟದಿಂದ ನಿನ್ನನ್ನು (ಅಮೃತಗೌಡ) ವರ್ಗಾವಣೆ ಮಾಡಿಸುತ್ತೇನೆ ಪುಟ 4ಕ್ಕೆ

ಬಂಧನಕ್ಕೆ ಎಚ್‌ಡಿಕೆ ಆಗ್ರಹ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ನಗರಸಭೆ ಆಯುಕ್ತೆಗೆ ಕಾಂಗ್ರೆಸ್ ಮುಖಂಡ ರಾಜೀವ್ ಅಶ್ಲೀಲ ಪದಗಳಿಂದ ನಿಂದಿಸಿ ಬೆದರಿಕೆ ಪುಟ 4ಕ್ಕೆ

ರಾಜೀವ್ ಬಂಧಿಸಲು ಛಲವಾದಿ ಒತ್ತಾಯ

ಬೆಂಗಳೂರು: ಶಿಡ್ಲಘಟ್ಟ ಪುರಸಭೆ ಮುಖ್ಯಾಧಿಕಾರಿ ಅಮೃತಗೌಡ ವಿರುದ್ಧ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವಾಚ್ಯ ಪದಗಳನ್ನು ಬಳಸಿದ್ದಕ್ಕಾಗಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಪುಟ 4ಕ್ಕೆ

ಮಕರ ಸಂಕ್ರಮಣಕ್ಕೆ ಮೈಸೂರು ಸಜ್ಜು

* ಶ್ರೀ ಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಸಂಭ್ರಮದ ಲಕ್ಷ ದೀಪೋತ್ಸವ

ಮೈಸೂರು: ಹೊಸ ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿ ಆಚರಣೆಗೆ ಸಾಂಸ್ಕೃತಿಕ ನಗರಿ ಮೈಸೂರು ಸಕಲ ರೀತಿಯಲ್ಲಿ ಸಜ್ಜಾಗಿದೆ. ನಗರದ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಪೂಜೆಗೆ ಸಿದ್ಧತೆ ನಡೆದಿದೆ.

ನಗರದ ಪ್ರಮುಖ ಮಾರುಕಟ್ಟೆಗಳಲ್ಲಿ ಜನಜಂಗುಳಿ ಜಾತ್ರೆ ನೆರೆದಿದೆ. ನಗರದ ದೇವರಾಜ ಮಾರುಕಟ್ಟೆ, ಅಗ್ರಹಾರ, ಗನ್ ಹೌಸ್ ಸೇರಿ ಮೊದಲಾದ ಕಡೆಗಳಲ್ಲಿ ಸಂಕ್ರಾಂತಿಗೆ ಸಾಮಗ್ರಿ ಕೊಳ್ಳಲು ಜನ ಸೇರಿ ಗಮನ ಸೆಳೆದರು.

ಕಬ್ಬು ಹಾಗೂ ಹೂವಿಗೆ ಬಾರಿ ಬೇಡಿಕೆ ಉಂಟಾಗಿದೆ. ಎಳ್ಳು, ಬೆಲ್ಲ, ಕಡಲೆ, ಒಣ ಕೊಬ್ಬರಿ, ಕಡಲೆಕಾಯಿ ಮಿಶ್ರಣವನ್ನು ವಿನಿಮಯ ಮಾಡಿಕೊಂಡು ಪುಟ 4ಕ್ಕೆ

ಮೃತ ಯೋಧನ ಪತ್ನಿ ಎಸ್.ಶಿಲ್ಪ ಹಾಗೂ ಕುಟುಂಬಸ್ಥರಿಗೆ ಶಾಸಕ ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ ಅವರು ಸಾಂತ್ವನ ಹೇಳಿದರು.

ಮಾಜಿ ಸಚಿವ ನಾಗೇಂದ್ರಗೆ ಕೋರ್ಟ್ ಬಿಗ್ ರಿಲೀಫ್

ಬೆಂಗಳೂರು: ವಾಲ್ಮೀಕಿ ಹಗರಣದ ಆರೋಪಿ, ಮಾಜಿ ಸಚಿವ ಬಿ.ನಾಗೇಂದ್ರಗೆ ಕೋರ್ಟ್ ಬಿಗ್ ರಿಲೀಫ್ ನೀಡಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಆದೇಶ ಹೊರಡಿಸಿದೆ.

ಮಹರ್ಷಿ ವಾಲ್ಮೀಕಿ ಬಹುಕೋಟಿ ಹಗರಣ ಪ್ರಕರಣದಲ್ಲಿ ಸಿಬಿಐ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದ ಬಳಿಕ ಬಂಧನ ಭೀತಿಯಲ್ಲಿದ್ದ ನಾಗೇಂದ್ರ ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮಂಗಳವಾರ ವಿಚಾರಣೆ ನಡೆಸಿದ್ದ ಕೋರ್ಟ್ ವಾದ–ಪ್ರತಿವಾದ ಆಲಿಸಿತ್ತು. ಬುಧವಾರಕ್ಕೆ (ಜ.14) ಆದೇಶ ಕಾಯ್ದಿರಿಸಿತ್ತು. ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ವಿಚಾರಣೆ ವೇಳೆ ಪ್ರಕರಣದ ತನಿಖಾಧಿಕಾರಿಯೇ ಕೋರ್ಟ್‌ನಲ್ಲಿ ವಾದಮಂಡನೆ ಮಾಡಿದ್ದರು. ವಾಲ್ಮೀಕಿ ಹಗರಣದಲ್ಲಿ ಹಣ ಪಡೆದವರನ್ನು ಸಿಐಡಿ, ಇಡಿ ತನಿಖೆ ಮಾಡಿದೆ. ಅದಕ್ಕಿಂತ ಮುಂದುವರೆದು ಇದರಿಂದ ಪುಟ 4ಕ್ಕೆ

ಮುಡಾ: ನಟೇಶ್‌ಗೆ ಅಕ್ರಮ ಪದೋನ್ನತಿ?

ಅಕ್ರಮ ಪ್ರಕರಣ ಉಲ್ಲೇಖಿಸಿ ಕೇಂದ್ರ ಸರ್ಕಾರಕ್ಕೆ ಕೆಆರ್‌ಎಸ್ ದೂರು

ನವದೆಹಲಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತರಾಗಿದ್ದ ಡಿ.ಬಿ.ನಟೇಶ್ ಅವರಿಗೆ 2005ರಿಂದಲೇ ಪೂರ್ವಾನ್ವಯ ಆಗುವಂತೆ ನಿಯಮಬಾಹಿರವಾಗಿ ಉಪವಿಭಾಗಾಧಿಕಾರಿ ಹುದ್ದೆಗೆ ಪದೋನ್ನತಿ ನೀಡಲು ಕರ್ನಾಟಕ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಕಾರ್ಯದರ್ಶಿ ಹಾಗೂ ಪ್ರಧಾನಿ ಸಚಿವಾಲಯದ ಕಾರ್ಯದರ್ಶಿಗೆ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ದಾಖಲೆಗಳ ಸಮೇತ ದೂರು ನೀಡಿದೆ.

ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿಯಾದ ನಟೇಶ್ ಮುಡಾ ನಿವೇಶನ ಅಕ್ರಮ ಪರಭಾರೆ ಹಗರಣ ಸೇರಿದಂತೆ ಹಲವು ಭ್ರಷ್ಟಾಚಾರ ಪ್ರಕರಣಗಳಿವೆ. ಸಚಿವ ಸಂಪುಟ ನಿರ್ಣಯದ ಮೂಲಕ ಬಡ್ತಿ ನೀಡಲು ಮುಂದಾಗಿರುವುದು ಅಕ್ರಮ. ಒಂದು ವೇಳೆ, ಎ.ಸಿ. ಹುದ್ದೆಗೆ ಪದೋನ್ನತಿ ಹೊಂದಿದರೆ ಅವರು ಐಎಎಸ್ ಹುದ್ದೆಗೆ ಅರ್ಹರು ಆಗುತ್ತಾರೆ. ಈ ನಿಯಮಬಾಹಿರ ಕ್ರಮವನ್ನು ಕೈಬಿಡಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಸಮಿತಿ ದೂರಿನಲ್ಲಿ ತಿಳಿಸಿದೆ.

2005ರಲ್ಲಿ ನಡೆದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪರೀಕ್ಷೆಗೆ ನಟೇಶ್ ಅವರು 3ಬಿ ಗ್ರಾಮೀಣ– ಪುಟ 4ಕ್ಕೆ

ಮೈ–ಬೆಂ ಮೇಲ್ಸೇತುವೆ ಕಾಮಗಾರಿ ತ್ವರಿತಕ್ಕೆ ಸಂಸದ ಯದುವೀರ್ ಮನವಿ

ಮೈಸೂರು: ಮೈಸೂರಿನಲ್ಲಿ ಮೂಲಸೌಕರ್ಯ ಕಾಮಗಾರಿಗಳನ್ನು ಅದರಲ್ಲೂ ಪ್ರಮುಖವಾಗಿ ಮಣಿಪಾಲ ಜಂಕ್ಷನ್ ಬಳಿ ಫ್ಲೈ ಓವರ್ ನಿರ್ಮಾಣ ಸಂಬಂಧ ತ್ವರಿತ ಕ್ರಮ ಕೈಗೊಳ್ಳುವಂತೆ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೋರಿದರು.

ಈ ಸಂಬಂಧ ನವದೆಹಲಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ರನ್ನು ಭೇಟಿ ಮಾಡಿದ ಅವರು, ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಹಾದಿಯಲ್ಲಿರುವ ಬರುವ ಕೆಂಪೇಗೌಡ ವೃತ್ತ (ಮಣಿಪಾಲ ಜಂಕ್ಷನ್)ದಲ್ಲಿ ಫ್ಲೈ ಓವರ್ ನಿರ್ಮಾಣ ಮಾಡಿದರೆ ಆಗುವ ಅನುಕೂಲಗಳ ಬಗ್ಗೆ ಮುಖ್ಯ ಕಾರ್ಯದರ್ಶಿಗಳಿಗೆ ಸಂಸದರು ಮನವರಿಕೆ ಮಾಡಿಕೊಟ್ಟರು. ಇದಕ್ಕೆ ಸಕಾರಾತ್ಮಕವಾಗಿ ಮುಖ್ಯ ಕಾರ್ಯದರ್ಶಿ ಸ್ಪಂದಿಸಿದ್ದಾರೆ. ಈ ಯೋಜನೆಯು ಮೈಸೂರಿಗೆ ಮೈಲಿಗಲ್ಲು ಯೋಜನೆಯಾಗಿದೆ. ಫ್ಲೈ ಓವರ್ ನಿರ್ಮಾಣಗೊಂಡರೆ ಅಪಘಾತಗಳು ಕಡಿಮೆಯಾಗಲಿವೆ, ಪ್ರಯಾಣದ ಸಮಯ ಇಳಿಕೆಯಾ ಗಲಿದೆ, ಜೊತೆಗೆ ಸಾರಿಗೆ ದಟ್ಟಣೆ ನಿವಾರಣೆಯಾಗಿ, ಮೈಸೂರಿಗೆ ಆಗಮಿಸುವ ಮತ್ತು ನಿರ್ಗಮಿಸುವ ಹಾದಿ ಸುಗಮವಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಮೈಸೂರು–ಕುಶಾಲನಗರ ಹೆದ್ದಾರಿಯಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಿಸುವ ಕುರಿತು ಸಂಸದರು ಮುಖ್ಯ ಕಾರ್ಯದರ್ಶಿಗಳ ಜೊತೆ ಸಮಾಲೋಚನೆ ನಡೆಸಿದರು. ಕ್ಷೇತ್ರಕ್ಕೆ ಹಲವಾರು ಮೂಲಸೌಕರ್ಯ ಯೋಜನೆಗಳನ್ನು ಮಂಜೂರು ಮಾಡುವಲ್ಲಿ ಉದಾರತೆ ತೋರುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ ಅಭಿನಂದಿಸಿದ್ದಾರೆ.

ಪ್ರಸಾರಾಂಗದ ಪ್ರಚಾರೋಪನ್ಯಾಸ ಜಗತ್ಪ್ರಸಿದ್ಧಿ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಚಾರೋಪನ್ಯಾಸ ಸರಣಿಯು ಜಗತ್ಪ್ರಸಿದ್ಧಿಯಾಗಿದೆ ಎಂದು ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ತಿಳಿಸಿದರು.

ಶೇಷಾದ್ರಿಪುರಂ ಪದವಿ ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ, ಕನ್ನಡ ವಿಭಾಗವು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ರಾಷ್ಟ್ರಕವಿ ಕುವೆಂಪು ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿ ಮಾತನಾಡಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಪಚಾರೋಪನ್ಯಾಸದ ಬಗ್ಗೆ ಪ್ರಸ್ತಾಪವಾಗಿ ಮೆಚ್ಚುಗೆ ವ್ಯಕ್ತವಾಗಿದೆ. ವಿಶ್ವವಿದ್ಯಾನಿಲಯದ ಹಿರಿಯರು, ಪ್ರಾಜ್ಞರು, ವಿದ್ವತ್‌ಪೂರ್ಣ ವ್ಯಕ್ತಿಗಳನ್ನು ಅವರ ಚಿಂತನೆ, ಸಂಶೋಧನೆಯನ್ನು ತಿಳಿಸುತ್ತಾ ಬಂದಿದೆ. ಇದುವರೆಗೂ 400ಕ್ಕೂ ಉಪನ್ಯಾಸ ಕಾರ್ಯಕ್ರಮಗಳು ನಡೆದಿವೆ ಎಂದರು.

ಸಂಶೋಧಕ ಪ್ರೊ.ಎಚ್.ವಿ.ನಾಗರಾಜರಾವ್ ಕನ್ನಡ ಮತ್ತು ಸಂಸ್ಕೃತದಲ್ಲಿ ಮುಕ್ತಕ ಸಾಹಿತ್ಯ ವಿಷಯ ಕುರಿತು ಮಾತನಾಡಿ, ಸಂಸ್ಕೃತದಲ್ಲಿ ಮುಕ್ತ ಎಂದರೆ ಮುತ್ತು ಎಂದರ್ಥ. ಮುಕ್ತಕ ಎಂದರೆ ಮುತ್ತಿನಂಥಾ ಮಾತು ಎಂದು ಗುರುತಿಸಬಹುದು. ಇನ್ನೊಂದು ಅರ್ಥದಲ್ಲಿ ಮುಕ್ತಕ ಎಂದರೆ ಸಂದರ್ಭದ ನಿರ್ಬಂಧದಿಂದ ಹೊರತಾಗಿರುವಂತದ್ದು ಎಂಬರ್ಥವಿದೆ ಎಂದರು. ಸಾಹಿತ್ಯದಲ್ಲಿ ನಾಲ್ಕು ಸಾಲುಗಳಲ್ಲಿ ಜೀವನದ ಸತ್ಯವನ್ನು ಅಡಗಿಸಿಟ್ಟು ಎಲ್ಲಾ ಸಂದರ್ಭದಲ್ಲಿಯೂ ಹೇಳಬಹುದಾದ ಕವಿತೆಗಳು ಮುಕ್ತಕಗಳಾಗಿವೆ. ಮುಕ್ತಕಗಳೆಲ್ಲೂ ಬದುಕಿಗೆ ದಾರಿದೀಪವಾಗಿವೆ ಎಂದರು.

ವಿದ್ಯಾರ್ಥಿಗಳು ಬದುಕು ರೂಪಿಸಿಕೊಳ್ಳಲು ಸಹಕಾರಿ ಎಂದು ಹೇಳಿದರು. ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಲಾವಣ್ಯ ಸಿಪಿ ಸ್ವಾಗತಿಸಿದರು. ಪ್ರಸಾರಾಂಗದ ವಿಶ್ರಾಂತ ಉಪ ನಿರ್ದೇಶಕ ಬಿ.ವಿ.ಶ್ರೀಧರ್, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಸಿದ್ದಪ್ಪ ಕೆ.ಎಂ., ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಉಪಸ್ಥಿತರಿದ್ದರು. ಸಹಾಯಕ ಪ್ರಾಧ್ಯಾಪಕಿ ರಶ್ಮಿ ಬಿ.ಕೆ. ವಂದಿಸಿದರು. ವಿದ್ಯಾರ್ಥಿನಿ ಪೂರ್ವಿ ನಿರೂಪಿಸಿದರು. ವಿದ್ಯಾರ್ಥಿನಿಯರಾದ ರುಚಿತಾ ರಾಜೇಶ್ ಮತ್ತು ಶಿವಾನಿ ಭೂಪಾಲಂ ಕುವೆಂಪು ಅವರ ಅನಿಕೇತನ ಗೀತೆಯನ್ನು ಹಾಡಿದರು.

ಪಾದಚಾರಿ ಮಾರ್ಗ ಒತ್ತುವರಿ: ಪಾಲಿಕೆಗೆ ಸವಾಲೆಸೆದ ವಕೀಲ

ಮೈಸೂರು: ನಗರದಲ್ಲಿ ಕನಿಷ್ಠ ಒಂದು ಕಿಲೋಮೀಟರ್ ಉದ್ದದ ಪಾದಚಾರಿ ಮಾರ್ಗವನ್ನು ಯಾವುದೇ ಒತ್ತುವರಿ ಇಲ್ಲದೆ ತೋರಿಸಿದರೆ, ಪಾಲಿಕೆಗೆ ನಾನು ಒಂದು ಲಕ್ಷ ರೂಪಾಯಿ ಬಹುಮಾನ ನೀಡುತ್ತೇನೆ ಎಂದು ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ವಕೀಲ ವೆಂಕಟೇಶ್ ಸವಾಲು ಹಾಕಿದರು.

ನಗರದಲ್ಲಿನ ಪಾದಚಾರಿ ಮಾರ್ಗಗಳು ಸಂಪೂರ್ಣವಾಗಿ ಒತ್ತುವರಿಗೊಳಗಾಗಿದ್ದು, ಕಾಲ್ನಡಿಗೆಯವರಿಗೆ ನಡೆಯಲು ಕೂಡ ಜಾಗವಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಅಂಗಡಿ ಮುಂಭಾಗದ ವಿಸ್ತರಣೆ, ತಾತ್ಕಾಲಿಕ ಶೆಡ್ ಗಳು, ಗೂಡಂಗಡಿ, ವಾಹನ ನಿಲುಗಡೆ ಸೇರಿ ಪಾದಚಾರಿ ಮಾರ್ಗಗಳು ನಾಶವಾಗಿವೆ. ಪಾಲಿಕೆ ಹಾಗೂ ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯದಿಂದ ಪಾದಚಾರಿ ಮಾರ್ಗಗಳು ಸಂಪೂರ್ಣವಾಗಿ ಮಾಯವಾಗಿವೆ. ಜನರ ಜೀವದ ಭದ್ರತೆಯನ್ನೇ ಪಣಕ್ಕಿಟ್ಟಂತಾಗಿದೆ ಎಂದು ಆರೋಪಿಸಿದರು.

"ನಗರದಲ್ಲಿ ಕನಿಷ್ಠ ಒಂದು ಕಿಲೋಮೀಟರ್ ಉದ್ದದ ಪಾದಚಾರಿ ಮಾರ್ಗವನ್ನು ಯಾವುದೇ ಒತ್ತುವರಿ ಇಲ್ಲದೆ ತೋರಿಸಿದರೆ, ಪಾಲಿಕೆಗೆ ನಾನು ಒಂದು ಲಕ್ಷ ರೂಪಾಯಿ ಬಹುಮಾನ ನೀಡುತ್ತೇನೆ" ಎಂದು ಘೋಷಿಸಿದ್ದಾರೆ. ಪಾಲಿಕೆ ವ್ಯಾಪ್ತಿ 17 ಸಾವಿರ ಚದರಡಿ ಬರುತ್ತದೆ. 12 ಸಾವಿರ ಕಿ.ಮೀ ವ್ಯಾಪ್ತಿ ಬಂದರೂ ಪುಟ್ ಪಾತ್ ಗಳ ತೆರವು ಕಾರ್ಯಾಚರಣೆ ಮಾಡಿಲ್ಲ. ಈ ವ್ಯಾಪ್ತಿಯಲ್ಲಿ ಅನಧಿಕೃತ ಮಳಿಗೆಗಳು ಹುಟ್ಟುಕೊಂಡಿವೆ. ಅವುಗಳನ್ನ ಪಾಲಿಕೆ ತೆರವುಗೊಳಿಸಿಲ್ಲ ಎಂದು ಕಿಡಿಕಾರಿದ್ದಾರೆ. ಈ ಸವಾಲು ಇದೀಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದ್ದು, ಪಾದಚಾರಿ ಮಾರ್ಗಗಳ ರಕ್ಷಣೆ ಹಾಗೂ ಒತ್ತುವರಿ ತೆರವು ಕುರಿತಾಗಿ ಅಧಿಕಾರಿಗಳು ಯಾವ ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ನಾಗರಿಕರು ಕಾದು ನೋಡಬೇಕಿದೆ.

30ಕ್ಕೆ ಸೀಟ್ ಎಡ್ಜ್ ಬಿಡುಗಡೆ

ಮೈಸೂರು: ಎನ್‌ಆರ್ ಸಿನೆಮಾ ಪ್ರೊಡಕ್ಷನ್ ವತಿಯಿಂದ ನಿರ್ಮಿಸಿರುವ ಕ್ಷಣ ಕ್ಷಣವೂ ಕುತೂಹಲ ಕೆರಳಿಸುವ ಹಾರರ್ ಹಾಗೂ ಕಾಮಿಡಿಯನ್ನೂ ಒಳಗೊಂಡ ಸೀಟ್ ಎಡ್ಜ್ ಚಲನಚಿತ್ರ ಇದೇ ಜ.30 ರಂದು ರಾಜ್ಯಾದ್ಯಂತ ಬಿಡುಗಡೆ ಕಾಣಲಿದೆ ಎಂದು ನಾಯಕ ನಟ ಸಿದ್ದು ಮೂಲಿಮನಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಚಿತ್ರದಲ್ಲಿ ಮೂರು ಹಾಡುಗಳಿವೆ, ಹೊಡೆದಾಟಗಳಿಲ್ಲ, ಸಂಪೂರ್ಣ ಮನರಂಜನೆ ಇದರ ಉದ್ದೇಶವಾಗಿದೆ. ಬೆಂಗಳೂರು, ಮೈಸೂರು, ಶಿವಮೊಗ್ಗ ಹಾಗೂ ಕುದುರೆ ಮುಖಗಳಲ್ಲಿ ಚಿತ್ರೀಕರಿಸಲಾಗಿದೆ. ಈಗಾಗಲೇ ಹಲವಾರು ಚಿತ್ರ ನಿರ್ದೇಶಿಸಿರುವ ಚೇತನ್ ಶೆಟ್ಟಿ ನಿರ್ದೇಶಿಸಿದ್ದಾರೆ. ರವೀಕ್ಷಾ ಶೆಟ್ಟಿ ನಾಯಕಿ ನಟಿಯಾಗಿ ಕಾಣಿಸಿಕೊಂಡಿದ್ದಾರೆಂದರು. ರವೀಕ್ಷಾ ಶೆಟ್ಟಿ ಮಾತನಾಡಿ, ಇದೊಂದು ಉತ್ತಮ ಮನರಂಜನೆ ಚಿತ್ರವಾಗಿದ್ದು, ನಾಡಿನ ಸಿನಿಮಾ ಪ್ರೇಕ್ಷಕರು ಪ್ರೋತ್ಸಾಹಿಸಬೇಕು. ಇದರಿಂದ ಇಂತಹ ಇನ್ನಷ್ಟು ಉತ್ತಮ ಚಿತ್ರ ನಿರ್ಮಿಸಲು ಪ್ರೋತ್ಸಾಹ ದೊರೆಯುತ್ತದೆ ಎಂದು ಮನವಿ ಮಾಡಿದರು. ಚೇತನ್ ಶೇಟಿ, ದೀಪಕ್ಕುಮಾರ್, ಆರ್ಯನ್ ಗಂಧದ ಗುಡಿ ಮೊದಲಾದವರು ಇದ್ದರು.

ಸಿಎಂ, ಡಿಸಿಎಂಗೆ ಬುಲಾವ್

ಮೂರನೇ ಪುಟದಿಂದ

ನಾವೆಲ್ಲ ಕಾಂಗ್ರೆಸ್ ಶಿಸ್ತಿನ ಸಿಪಾಯಿಗಳು ಹೈಕಮಾಂಡ್ ಹೇಳಿದಂತೆ ಕೇಳ್ತೀವಿ. ರನ್ ವೇ ಯಲ್ಲಿ ಚರ್ಚೆ ಅಂತ ಅಲ್ಲ. ರಾಹುಲ್ ಅಲ್ಲಿಗೆ ಬಂದಿದ್ದರು. ಬಂದಾಗ ಮಾತಾಡಿದ್ದಾರೆ ಅಷ್ಟೆ. ಸಂಪುಟ ವಿಸ್ತರಣೆ ಸೇರಿದಂತೆ ಎಲ್ಲ ವಿಚಾರಗಳ ಬಗ್ಗೆ ದೆಹಲಿಯಲ್ಲಿ ಚರ್ಚೆ ಮಾಡ್ತಾರೆ. ನಾನು ಮಂತ್ರಿ ಆಗಬೇಕು. ಎಲ್ಲದರ ಬಗ್ಗೆ ದೆಹಲಿಯಲ್ಲಿ ಕರೆದು ಮಾತಾಡ್ತಾರೆ ಎಂದು ತಿಳಿಸಿದರು

ಕರ್ನಾಟಕ ಸರ್ಕಾರ

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ,

ಪುಲಿಕೇಶಿ ರಸ್ತೆ, ತಿಲಕನಗರ ಮೈಸೂರು.

ದೂ.ಸಂ:0821–2490111 e-mail : ddwomysore@yahoo.com,

ಸಂ:ಜಿಅಂಕಅ/ಸ್ಥ.ಪ್ರ.ಅನುದಾನ/2025–26/ ದಿನಾಂಕ: 12.01.2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ("ದ್ವಿ–ಲಕೋಟೆ ಪದ್ಧತಿಯಲ್ಲಿ")

2025–26ನೇ ಸಾಲಿನಲ್ಲಿ ಮಾನ್ಯ ಸಂಸತ್ ಸದಸ್ಯರ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಅರ್ಹ ತೀವ್ರತರನಾದ ವಿಕಲಚೇತನರಿಗೆ ಬಳಕೆಗೆ ಅನುಕೂಲವಾಗುವಂತೆ ಎರಡು ಹೆಚ್ಚುವರಿ ಚಕ್ರಗಳ ರೆಟ್ರೋಫಿಟ್‌ಮೆಂಟ್ ಜೋಡಣೆಯ **ಅಂದಾಜು ಮೊತ್ತ ರೂ.20,00 ಲಕ್ಷಗಳ ಮೌಲ್ಯದ 16** ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಅಧಿಕೃತ ಸರಬರಾಜುದಾರ/ ತಯಾರಕ ಸಂಸ್ಥೆಗಳಿಂದ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಅದರನ್ವಯ 100–115 ಸಿಸಿ ಸಾಮರ್ಥ್ಯದ ಉತ್ತಮ ವಿನ್ಯಾಸ ಹೊಂದಿರುವ ಗುಣಮಟ್ಟದ ಎರಡು ಹೆಚ್ಚುವರಿ ಚಕ್ರಗಳ ರೆಟ್ರೋಫಿಟ್‌ಮೆಂಟ್ ಜೋಡಣೆಯ ಯಂತ್ರಚಾಲಿತ ದ್ವಿಚಕ್ರವಾಹನಗಳನ್ನು ಸರಬರಾಜು ಮಾಡಲು ಅಧಿಕೃತ ಸಂಸ್ಥೆಗಳಿಂದ ಮಾತ್ರ ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ವೇಳಾಪಟ್ಟಿ: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **29.01.2026** ಸಂಜೆ 4.00 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **02.02.2026** ಬೆಳಿಗ್ಗೆ 11.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **07.02.2026 ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್‌ನ್ನು ಹಾಜರಿರುವ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುತ್ತದೆ.

ಸಹಿ/– ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಮೈಸೂರು

DIPR/DDMYS/1506/KSMCA/856/2025-26

ವಿಜಯಾನಂದ ಸ್ವಾಮೀಜಿ ಜನ್ಮದಿನ

ಮೈಸೂರು: ನಗರದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಭಕ್ತವೃಂದದವತಿಯಿಂದ ಆಶ್ರಮದ ಕಿರಿಯ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ ಜನ್ಮ ದಿನವನ್ನು ಅರುಣೋದಯ ವಿಕಲಚೇತನ ಮಕ್ಕಳ ಶಾಲೆಯಲ್ಲಿ ಸಂಭ್ರಮದಿಂದ ಆಚರಣೆ ಮಾಡಲಾಯಿತು.

ಇದೇ ವೇಳೆ ಸಂಕ್ರಾಂತಿ ಹಬ್ಬದ ಶುಭಾಷಯ ತಿಳಿಸಿ ವಿಕಲಚೇತನ ಮಕ್ಕಳಿಗೆ ಎಳ್ಳುಬೆಲ್ಲ ವಿತರಿಸಿದ ಕೇಬಲ್ ಮಹೇಶ್ ಮಾತನಾಡಿ, ದೊಡ್ಡಗುರುಗಳ ಹಾದಿಯಲ್ಲಿ ಚಿಕ್ಕ ಗುರುಗಳೂ ಕೂಡ ಸಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಆಶ್ರಮವೂ ಕೂಡ ಉತ್ತಮ ಪಥದಲ್ಲಿ ನಡೆಯಿತ್ತಿದ್ದು, ಹಲವಾರು ಬಡವರಿಗೆ ಅಸಹಾಯಕರಿಗೆ ಆಶ್ರಮ ಸೇವೆ ಮಾಡುತ್ತಿದೆ. ಬಡಜನರಿಗೆ ಇದೊಂದು ಶಕ್ತಿ ಪೀಠ ಎಂದರು. ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಂಪ್ರಸಾದ್ ಮಾತನಾಡಿ, ಶ್ರೀ ಗಣಪತಿ ಆಶ್ರಮದ ಜನಪರ ಕಾಯಕ ನಮಗೆ ಪ್ರೇರಣೆಯಾಗಿದೆ. ಕೋವಿಡ್ ಸಂದರ್ಭದಲ್ಲಿ ಬಡವರಿಗೆ ಆಹಾರ ವಿತರಣೆ ಮಾಡಿ, ನಿತ್ಯ ಅನ್ನದಾಸೋಹ ಮಾಡಿದ್ದು ಶ್ಲಾಘನೀಯ. ಜತೆಗೆ ಸನಾತನ ಧರ್ಮದ ಉಳಿವಿಗಾಗಿ ಮಾಡುತ್ತಿರುವ ನಿರಂತರ ಪ್ರಯತ್ನದಲ್ಲಿ ಕಿರಿಯ ಸ್ವಾಮೀಜಿ ದತ್ತ ವಿಜಯಾನಂದ ಶ್ರೀಗಳ ಕೊಡುಗೆಯೂ ಸ್ಮರಣೀಯ ಎಂದರು. ದೂರ ರಾಜಣ್ಣ, ನಾಗೇಂದ್ರ, ಜಯಸಿಂಹ, ಸಂದೀಪ್, ಆನಂದ, ಸುಚೀಂದ್ರ, ಚಕ್ರಪಾಣಿ ಇನ್ನಿತರರು ಉಪಸ್ಥಿತರಿದ್ದರು.

ವಿಕಲಚೇತನ ಮಕ್ಕಳಿಗೆ ಎಳ್ಳುಬೆಲ್ಲ ವಿತರಣೆ

ಸಚಿವರಿಂದ ಕ್ಯಾಲೆಂಡರ್ ಬಿಡುಗಡೆ

ಚಾಮರಾಜನಗರ, ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆಯು ಹೊರತಂದಿರುವ 2026 ನೇ ಸಾಲಿನ ಕ್ಯಾಲೆಂಡರ್ ನ್ನು ಕೇಂದ್ರ ರೈಲ್ವೆ ರಾಜ್ಯ ಉಸ್ತುವಾರಿ ಸಚಿವ ವಿ.ಸೋಮಣ್ಣ ಬಿಡುಗಡೆ ಮಾಡಿ ಶುಭ ಕೋರಿದರು.

ತಾಲೂಕಿನ ಸಂತೇಮರಹಳ್ಳಿಯ ಎಂ.ಪಿ. ಬಸವಣ್ಣ ನಿವಾಸದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿ ಶುಭ ಕೋರಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಎಸ್.ಬಾಲರಾಜು, ಬಿಜೆಪಿ ಮುಖಂಡ ಎಂ.ಪಿ.ಬಸವಣ್ಣ, ಶಂಕರಪ್ಪ, ನಿವೃತ್ತ ಪೋಲಿಸ್ ಅಧಿಕಾರಿ ಬಿ.ಪುಟ್ಟಸ್ವಾಮಿ, ಭೋಗಾಪುರ ರಾಜ್ ಗೋಪಾಲ್, ಉದ್ಯಮಿ ಶ್ರೀನಿಧಿಕುದರ್, ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಅಧ್ಯಕ್ಷ ಹೆಚ್.ಎಂ.ಶಿವಣ್ಣ ಹೊಸೂರು, ಸಂಘಟನಾ ಕಾರ್ಯದರ್ಶಿ ಬಂಗಾರು ಇತರರು ಹಾಜರಿದ್ದರು.

ಮೂರನೇ ಪುಟದಿಂದ

ಮುಡಾ: ನಟೇಶ್‌ಗೆ ಅಕ್ರಮ ಪದೋನ್ನತಿ?

ಕೆಎಎಸ್ ಮೀಸಲಾತಿ ಅಡಿ ಅರ್ಜಿ ಸಲ್ಲಿಸಿದ್ದರು. ಕೆಪಿಎಸ್‌ಸಿ 2006ರ ಮಾರ್ಚ್‌ನಲ್ಲಿ ನಡೆಸಿದ್ದ ಸಂದರ್ಶನದ ಸಂದರ್ಭದಲ್ಲಿ ವಿದ್ಯಾಭ್ಯಾಸದ ಪ್ರಮಾಣಪತ್ರಗಳ ಮೂಲಪ್ರತಿಗಳನ್ನು ಹಾಜರುಪಡಿಸಿದ್ದರು. ಆದರೆ, ಮೀಸಲಾತಿ ಪ್ರಮಾಣಪತ್ರಗಳನ್ನು ನೀಡಿರಲಿಲ್ಲ. ಬಸ್‌ನಲ್ಲಿ ಬರುವಾಗ ಕಳೆದುಹೋಗಿದೆ ಎಂದು ಕಾರಣ ನೀಡಿದ್ದರು.

ಆಯೋಗ ನಟೇಶ್ ಅವರನ್ನು ಸಾಮಾನ್ಯ ವಿಭಾಗಕ್ಕೆ ಪರಿಗಣಿಸಿ ತಹಶೀಲ್ದಾರ್ ಹುದ್ದೆಗೆ ಆಯ್ಕೆ ಮಾಡಿತ್ತು. 3ಬಿ ಗ್ರಾಮೀಣ, ಕೆಎಎಸ್ ಮೀಸಲಾತಿ ಅಡಿ ತನ್ನನ್ನು ಪರಿಗಣಿಸಿ ಉಪವಿಭಾಗಾಧಿಕಾರಿ ಹುದ್ದೆ ನೀಡಬೇಕು ಎಂದು ಒತ್ತಾಯಿಸಿ ನಟೇಶ್ ಅವರು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ ಮೆಟ್ಟಿಲೇರಿದ್ದರು. ಕೆಪಿಎಸ್‌ಸಿ ನಿರ್ಣಯ ಸರಿ ಇದೆ ಎಂದು 2012ರ ಜನವರಿಯಲ್ಲಿ ಆದೇಶ ನೀಡಿದ್ದ ನ್ಯಾಯಮಂಡಳಿಯು ನಟೇಶ್ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ಗೆ ಮೇಲ್ಮನವಿ ಸಲ್ಲಿಸಿದ್ದರು. ನ್ಯಾಯಮಂಡಳಿ ಆದೇಶವನ್ನು ಹೈಕೋರ್ಟ್ 2012ರ ಅಕ್ಟೋಬರ್‌ನಲ್ಲಿ ಎತ್ತಿ ಹಿಡಿದಿತ್ತು. ಹೈಕೋರ್ಟ್ ಆದೇಶದ ವಿರುದ್ಧ ನಟೇಶ್ ಅವರು ಸುಪ್ರೀಂ ಕೋರ್ಟ್ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ 2014ರಲ್ಲಿ ವಜಾಗೊಳಿಸಿತ್ತು.

ನಟೇಶ್ ಅವರು ಮುಡಾ ಆಯುಕ್ತರಾಗಿದ್ದ ಸಂದರ್ಭದಲ್ಲಿ ನೂರಾರು ಕೋಟಿಗಳ ಅಕ್ರಮ ನಡೆದಿದೆ. ಸರ್ಕಾರದ ಬೊಕ್ಕಸಕ್ಕೆ ಅಪಾರ ನಷ್ಟ ಉಂಟಾಗಿದೆ. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಫಲಾನುಭವಿ ಆಗಿತ್ತು. ಆ ಬಳಿಕ ಮುಖ್ಯಮಂತ್ರಿ ಕುಟುಂಬವು 14 ನಿವೇಶನಗಳನ್ನು ಹಿಂತಿರುಗಿಸಿತ್ತು. ಇಷ್ಟೆಲ್ಲ ಅಕ್ರಮಗಳಲ್ಲಿ ಪ್ರಮುಖ ಪಾತ್ರಧಾರಿಯಾದ ಅಧಿಕಾರಿಗೆ ಪೂರ್ವಾನ್ವಯವಾಗುವಂತೆ ಬಡ್ತಿ ನೀಡುವ ಮೂಲಕ ಮುಖ್ಯಮಂತ್ರಿ ಅವರು ಋಣಸಂದಾಯ ಮಾಡಲು ಮುಂದಾಗಿದ್ದಾರೆ ಎಂಬ ಅನುಮಾನ ಮೂಡುತ್ತಿದೆ ಎಂದು ಪಕ್ಷವು ದೂರಿನಲ್ಲಿ ತಿಳಿಸಿದೆ.

ಜೈಲು ಸುಧಾರಣೆ ಸಮಿತಿ ವರದಿ

ಎಂದು ಪರಮೇಶ್ವರ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಹಿತೇಂದ್ರ ನೇತೃತ್ವದ ಸಮಿತಿಯು ವರದಿಯನ್ನು ಸಲ್ಲಿಸಿದೆ. ನಾನು ಅದರ ಬಗ್ಗೆ ಚರ್ಚಿಸುತ್ತೇನೆ ಮತ್ತು ಅಗತ್ಯವಿದ್ದರೆ ಅದನ್ನು ಸಚಿವ ಸಂಪುಟಕ್ಕೆ ಸಲ್ಲಿಸುತ್ತೇನೆ. ಕೆಲವು ಶಿಫಾರಸುಗಳನ್ನು ಮಾಡಲಾಗಿದೆ. ಅದನ್ನು ನಾನು ಮುಖ್ಯಮಂತ್ರಿಯೊಂದಿಗೆ ಪರಿಶೀಲಿಸುತ್ತೇನೆ ಎಂದು ಅವರು ಹೇಳಿದರು.

ರಾಜ್ಯದ ಕೆಲವು ಜೈಲುಗಳಲ್ಲಿ ಕೈದಿಗಳಿಗೆ ರಾಜಾತಿಥ್ಯ ಮತ್ತು ಕಾನೂನುಬಾಹಿರ ಚಟುವಟಿಕೆಗಳ ಆರೋಪಗಳ ಹಿನ್ನೆಲೆಯಲ್ಲಿ ಈ ವರದಿ ಸಲ್ಲಿಸಲಾಗಿದೆ. ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದೊಳಗೆ ಕುಖ್ಯಾತ ಅಪರಾಧಿಗಳು ಮತ್ತು ಶಂಕಿತ ಉಗ್ರರು ಸೇರಿದಂತೆ ಕೈದಿಗಳಿಗೆ ರಾಜಾತಿಥ್ಯ ನೀಡುತ್ತಿರುವುದನ್ನು ತೋರಿಸಿದ ವಿಡಿಯೋಗಳು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದ ನಂತರ ವಿವಾದ ಭುಗಿಲೆದ್ದಿತು. ಜೈಲು ಸುಧಾರಣೆಗೆ ಸರ್ಕಾರ ಸಮಿತಿ ರಚನೆ ಮಾಡಿತ್ತು.

ಬಂಧನಕ್ಕೆ ಎಚ್‌ಡಿಕೆ ಆಗ್ರಹ

ಹಾಕಿರುವ ಪ್ರಕರಣಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಕರೆ ಮಾಡಿದ ಕೇಂದ್ರ ಸಚಿವರು, ಘಟನೆಯ ಬಗ್ಗೆ, ನಿಂದಿಸಿದ ಆಡಿಯೋ ಕಳಿಸಿ ಆಕ್ರೋಶ ಹೊರ ಹಾಕಿದರು. ನೀವೂ ಒಬ್ಬ ಹೆಣ್ಣುಮಗಳಾಗಿ ನಿಮ್ಮ ಅಧೀನದಲ್ಲಿ ಕೆಲಸ ಮಾಡುವ ಮಹಿಳಾ ಅಧಿಕಾರಿಗಳಿಗೆ ರಕ್ಷಣೆ ಇಲ್ಲವೇ ಎಂದು ಬೇಸರ ವ್ಯಕ್ತಪಡಿಸಿದರು. ಅಧಿಕಾರಿಗಳಿಗೆ ಆವಾಜ್ ಹಾಕಿ ಅಶ್ಲೀಲ ಪದಗಳಿಂದ ನಿಂದಿಸಿದರೆ ಅವರು ಕೆಲಸ ಮಾಡುವುದು ಹೇಗೆ? ಎಂದು ಪ್ರಶ್ನಿಸಿರುವ ಕುಮಾರಸ್ವಾಮಿ, ಕೂಡಲೇ ರಾಜೀವ್ ಅನ್ನು ಬಂಧಿಸಬೇಕು ಎಂದು ಮುಖ್ಯಕಾರ್ಯದರ್ಶಿ ಅವರಿಗೆ ಆಗ್ರಹಿಸಿದ್ದಾರೆ.

ನಾಗೇಂದ್ರಗೆ ಕೋರ್ಟ್ ಬಿಗ್ ರಿಲೀಫ್

ಫಲಾನುಭವಿಗಳು ಯಾರು ಅನ್ನೋದನ್ನ ಪತ್ತೆ ಹಚ್ಚಬೇಕಿದೆ. ಇಲ್ಲಿಯವರೆಗೂ ನಡೆದ ತನಿಖೆಯ ಕೆಲ ಮಾಹಿತಿಗಳನ್ನ ತೆರೆದ ನ್ಯಾಯಾಲಯದಲ್ಲಿ ಹೇಳಲು ಸಾಧ್ಯವಿಲ್ಲ. ಮುಂಬೈನಲ್ಲಿ ಕೂಡ ದಾಳಿ ಮಾಡಿ ಮಾಹಿತಿ ಕಲೆಹಾಕಲಾಗಿದೆ. ಹಗರಣದ ಹಣ ಚಿನ್ನ, ಬುಲಿಯನ್ ಆಗಿ ಕನ್ವರ್ಟ್ ಆಗಿದೆ. ಇದರ ಹಿಂದೆ ನಾಗೇಂದ್ರ, ಅವರ ಸಹಚರರು ಭಾಗಿಯಾಗಿದ್ದಾರೆ. ಈ ಪ್ರಕರಣದ ಬಗ್ಗೆ ಸಾಕಷ್ಟು ಸಾಕ್ಷ್ಯಗಳನ್ನ ಕಲೆ ಹಾಕಲಾಗಿದೆ ಎಂದು ಹೇಳಿ ಕೋರ್ಟ್ಗೆ ತಂದಿದ್ದ ಎರಡು ಸೂಟ್‌ಕೇಸ್ ದಾಖಲೆಗಳನ್ನ ತನಿಖಾಧಿಕಾರಿ ಪ್ರದರ್ಶಿಸಿದರು.

ನಾಗೇಂದ್ರ ಪರ ವಕೀಲರು ವಾದ ಮಂಡನೆ ಮಾಡಿ, ನಾಗೇಂದ್ರ ಮತ್ತು ನೆಕ್ಕಂಟಿ ನಾಗರಾಜ್ ನಡುವಿನ ವ್ಯವಹಾರ ವೈಯಕ್ತಿಕವಾಗಿದೆ. ಸಿಬಿಐ ಹೇಳುತ್ತಿರುವ ಟೆಂಡರ್‌ಗೂ ಈ ವ್ಯವಹಾರಗಳಿಗೂ ಯಾವುದೇ ಸಂಬಂಧವಿಲ್ಲ ಎಂದು ವಾದಿಸಿದ್ದರು.

ಮೈಸೂರಲ್ಲೂ ಶಿವಸೇನೆ ಪಕ್ಷಕ್ಕೆ ಚಾಲನೆ

ಮೈಸೂರು: ಮಹಾರಾಷ್ಟ್ರದಲ್ಲಿ ಪ್ರಾಬಲ್ಯ ಹೊಂದಿರುವ ಶಿವಸೇನೆ ಕರ್ನಾಟಕದಲ್ಲೂ ತನ್ನ ವ್ಯಾಪ್ತಿ ವಿಸ್ತರಿಸಿದ್ದು, ರಾಜ್ಯದ 13ನೇ ಜಿಲ್ಲೆಯಾಗಿ ಮೈಸೂರಿನಲ್ಲಿಯೂ ತನ್ನ ಘಟಕ ಆರಂಭಿಸಿದೆ.

ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ ಕುಲಕರ್ಣಿ ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜ್ಯದಲ್ಲಿ ಪಕ್ಷವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಿಂದೂ ವಿರೋಧೀ ನೀತಿ ವಿರುದ್ಧ ಧ್ವನಿಯೆತ್ತಲಿದೆ. ಸೆಂದಿಲ್ ಕುಮಾರ್ ಜಿಲ್ಲಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ ಮಾಡಲಿದ್ದಾರೆ. ರಾಜ್ಯದಲ್ಲಿ ನಡೆಯುವ ಜಿಪಂ, ತಾಪಂ ಹಾಗೂ ಗ್ರಾಪಂ ಚುನಾವಣೆಗಳಲ್ಲಿ ಪಕ್ಷ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಕಾಶ್ಮೀರಿ ಹಿಂದೂಗಳ ಹಕ್ಕಿಗಾಗಿ ಜ. 16 ರಿಂದ 19 ರವರೆಗೆ ಜಮಮುವಿನಲ್ಲಿ ನಡೆಯುವ ಅಧಿವೇಶನದಲ್ಲಿ ರಾಜ್ಯದಿಂದ ಪಕ್ಷದ ಆರು ಮಂದಿ ಪ್ರತಿನಿಧಿಗಳು ಪಾಲ್ಗೊಂಡು, ವಲಸೆ ಹೋಗಿರುವ ಕಾಶ್ಮೀರಿಗಳು ಮರಳಿ ವಾಪಸಾಗಬೇಕೆಂಬ ಬೇಡಿಕೆ, ಅವರಿಗೆ ಸೌಲಭ್ಯ ಕಲ್ಪಿಸಬೇಕೆಂಬುದಕ್ಕೆ ಬೆಂಬಲ ನೀಡಲಿದ್ದಾರೆಂದರು. ಇದಲ್ಲದೆ, ರಾಜ್ಯದಲ್ಲಿಯೂ ಅಕ್ರಮವಾಗಿ ಬಾಂಗ್ಲಾದಿಂದ ಲಕ್ಷಾಂತರ ಸಂಖ್ಯೆಯಲ್ಲಿ ಜನರು ನುಸುಳಿದ್ದಾರೆ. ಬೆಂಗಳೂರಿನ ಪ್ರಮುಖ ಹೋಟೆಲ್ಗಳಲ್ಲಿ ಅವರೇ ಕೆಲಸದಲ್ಲಿದ್ದಾರೆ. ಬಿಜೆಪಿ ಹಾಗೂ ಮೈತ್ರಿಯೇತರ ರಾಜ್ಯಗಳಲ್ಲಿ ಇವರ ವಿರುದ್ಧ ಮೃದು ಧೋರಣೆ ಅನುಸರಿಸಲಾಗುತ್ತಿದೆ. ಹೀಗಾಗಿ ಇವರನ್ನು ಪತ್ತೆಹಚ್ಚಿ ವಾಪಸು ಕಳಿಸಬೇಕೆಂಬ ಹೋರಾಟ ಪಕ್ಷ ಮಾಡಲಿದೆ ಎಂದರು. ರಾಜ್ಯ ವಕ್ತಾರ ಎಸ್.ಭಾಸ್ಕರನ್, ಸೆಂದಿಲ್ಕುಮಾರ್, ಗಂಗಾಧರ್, ಅಮರ್ನಾಥ್, ಬೀರೇಶ್ ಇದ್ದರು.

ಮೂರನೇ ಪುಟದಿಂದ

ಬಳ್ಳಾರಿ ನಂತರ ಶಿಡ್ಲಘಟ್ಟದಲ್ಲಿಯೂ ಪುರಸಭೆಗೆ ಬೆಂಕಿ ಹಚ್ಚುವ ಬೆದರಿಕೆ

ಎಂದು ರಾಜೀವ್ ಗೌಡ ಬೆದರಿಕೆ ಹಾಕಿರುವ ಸಂಭಾಷಣೆಯ ಆಡಿಯೋ ವೈರಲ್ ಆಗಿದೆ. ಮನನೊಂದ ಅಮೃತಾ ಗೌಡ ಕಣ್ಣೀರಿಟ್ಟಿದ್ದಾರೆ. ಈ ಘಟನೆ ಚಿಕ್ಕಬಳ್ಳಾಪುರದಲ್ಲಿ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಕಾಂಗ್ರೆಸ್ ನಾಯಕನ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ ಪುರಸಭೆ ಕಚೇರಿ ಹೊರಗೆ ನೌಕರರು ಮತ್ತು ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ಆಡಿಯೋದಲ್ಲಿ ಅಮೃತಾ, ಬ್ಯಾನರ್ ಅಪಘಾತಗಳಿಗೆ ಕಾರಣವಾಗುತ್ತಿದ್ದ ಕಾರಣ ಜನನಿಬಿಡ ಜಾಗಗಳಿಂದ ತೆಗೆದುಹಾಕಲಾಗಿದೆ. ಅಲ್ಲದೆ ಅನುಮತಿ ಸಹ ಪಡೆದಿಲ್ಲ ಎಂದು ರಾಜೀವ್ ಗೌಡಗೆ ವಿವರಿಸಲು ಪ್ರಯತ್ನಿಸಿದರೂ ಅರ್ಥ ಮಾಡಿಕೊಳ್ಳದ ರಾಜೀವ್ ಗೌಡ, ನನ್ನ ಬ್ಯಾನರ್ ತೆಗೆದರೆ ನಾನು ಬಂದು ಬೆಂಕಿ ಹಚ್ಚುತ್ತೇನೆ ಎಂದು ಹೇಳಿದ್ದಾರೆ. ಮಾಧ್ಯಮಗಳ ಮುಂದೆ ಅಮೃತಾ ಗೌಡ ಕಣ್ಣೀರಿಟ್ಟಿದ್ದಾರೆ.

ಆಡಿಯೋ ವೈರಲ್ ಆಗುತ್ತಿದ್ದಂತೆ ಈ ಬಗ್ಗೆ ಪ್ರತಿಕ್ರಿಯಿಸಿದ ರಾಜೀವ್ ಗೌಡ, ಬ್ಯಾನರ್ ಅವಳವಡಿಸಲು ಅನುಮತಿ ಪಡೆಯಲಾಗಿದೆ. ನಾನು ಯಾರ ವಿರುದ್ಧವೂ ಅವಹೇಳನಕಾರಿ ಪದ ಬಳಸಿಲ್ಲ. ನನ್ನ ಆಡಿಯೋದಲ್ಲಿನ ನನ್ನ ಮಾತುಗಳನ್ನು ತಿರುಚಲಾಗಿದೆ ಎಂದು ಹೇಳಿದ್ದಾನೆ.

ಮಕರ ಸಂಕ್ರಮಣಕ್ಕೆ ಮೈಸೂರು ಸಜ್ಜು

ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ ಎಂದು ಶುಭ ಹಾರೈಸಲಾಗುತ್ತದೆ.

ಸಿದ್ದಲಿಂಗಪುರ ಸೇರಿ ಮೊದಲಾದ ಸ್ಥಳಗಳಲ್ಲಿ ಹುಲ್ಲಿಗೆ ಬೆಂಕಿ ಹಚ್ಚಿ ಅಲಂಕರಿಸಿದ ದನ–ಕರುಗಳನ್ನು ಕಿಚ್ಚು ಹಾಯಿಸುವ ಮೂಲಕ ಗ್ರಾಮೀಣ ಭಾಗದಲ್ಲಿ ಜನರು ಸಂಕ್ರಾಂತಿ ಸಂಭ್ರಮಿಸುತ್ತಾರೆ. ಚಾಮುಂಡಿ ಬೆಟ್ಟದ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ ಮತ್ತು ವಿಶೇಷ ಪೂಜೆ ಬುಧವಾರ ನಡೆಯಿತು. ಅಲ್ಲದೆ, ನಗರದ ವಿವಿಧ ದೇವಾಲಯಗಳಲ್ಲಿ ಸಂಕ್ರಾಂತಿ ಅಂಗವಾಗಿ ವಿಶೇಷಪೂಜೆ, ಅರ್ಚನೆ, ಅಭಿಷೇಕ ಆಯೋಜಿಸಿಲಾಗಿದೆ. ವಿವಿಧ ದೇವಾಲಯಗಳಲ್ಲಿ ಗೋಪೂಜೆ ಮಾಡಿ ಪ್ರಸಾದ ವಿತರಣೆಗೆ ಸಿದ್ಧತೆ ನಡೆದಿದೆ.

ರಾಜೀವ್ ಬಂಧಿಸಲು ಛಲವಾದಿ ಒತ್ತಾಯ

ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬಳ್ಳಾರಿಯಲ್ಲಿ ಕಾಂಗ್ರೆಸ್ ನಾಯಕ ರಾಜಶೇಖರ ರೆಡ್ಡಿ ಸಾವಿಗೆ ವಿವಾದಾತ್ಮಕ ಬ್ಯಾನರ್ ಕಾರಣವಾಗಿತ್ತು. ಇದೀಗ ಚಿಕ್ಕಬಳ್ಳಾಪುರದಲ್ಲಿ ಮತ್ತೊಮ್ಮೆ ಬ್ಯಾನರ್ ಘಟನೆ ನಡೆದಿದೆ. ಸಿಎಂ ಸಿದ್ದರಾಮಯ್ಯ ಅವರು ರಾಜೀವ್ ಗೌಡನನ್ನು ಬಂಧಿಸಲು ತಕ್ಷಣ ಆದೇಶಿಸಬೇಕು ಎಂದು ನಾರಾಯಣಸ್ವಾಮಿ ಆಗ್ರಹಿಸಿದರು.

ಜ.22ರಿಂದ ವಿಶೇಷ ಅಧಿವೇಶನ

ಮೊದಲ ಪುಟದಿಂದ

ಅಧಿವೇಶನದಲ್ಲಿ ಚರ್ಚಿಸಲು ನಿರ್ಧರಿಸಲಾಗಿದೆ. ಅಲ್ಲದೆ ಈ ವಿಶೇಷ ಅಧಿವೇಶನದಲ್ಲಿ ವಿಬಿಜಿ ರಾಮ್‌ಜಿ ಕಾಯ್ದೆಯನ್ನು ಹಿಂಪಡೆದು ಮನರೇಗಾ ಕಾಯ್ದೆಯನ್ನೇ ಮರು ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ನಿರ್ಣಯ ಅಂಗೀಕರಿಸಲು ಸರ್ಕಾರ ಮುಂದಾಗಿದೆ.

ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿಬಿಜಿ ರಾಮ್‌ಜಿ ಕಾಯ್ದೆಯನ್ನು ವಿರೋಧಿಸಿ ನಿರ್ಣಯವನ್ನು ಕೈಗೊಳ್ಳಲಾಗಿತ್ತು. ಅಲ್ಲದೆ, ಈ ಕಾಯ್ದೆ ವಿರುದ್ಧ ಕಾನೂನು ಹೋರಾಟ ನಡೆಸುವ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಂಡಿತ್ತು.

ಭೀಕರ ಅಪಘಾತ: ಮೂವರು ಸಾವು

ಶಿವಮೊಗ್ಗ: ಕಾರು ಮತ್ತು ಕೆಎಸ್‌ಆರ್‌ಟಿಸಿ ಬಸ್ ನಡುವೆ ಡಿಕ್ಕಿ ಸಂಭವಿಸಿ ಮಗು ಸೇರಿದಂತೆ ಮೂವರು ಸಾವನ್ನಪ್ಪಿದ ಘಟನೆ ತೀರ್ಥಹಳ್ಳಿ ತಾಲೂಕಿನ ಭಾರತೀಪುರ ಕ್ರಾಸ್ ಬಳಿ ನಡೆದಿದೆ.

ರಿಯಾಜ್ ಅಹಮದ್ ಹಾಗೂ ಫಾತಿಮಾ ಮೃತರು. ಮಗು, ಕಾರಿನ ಚಾಲಕ ಮತ್ತು ಪಕ್ಕದ ಸೀಟಿನಲ್ಲಿದ್ದ ಮಹಿಳೆ ಮೃತಪಟ್ಟಿದ್ದಾರೆ. ಕಾರಿನಲ್ಲಿದ್ದ ಉಳಿದ ಮೂವರು ಗಂಭೀರ ಗಾಯಗೊಂಡಿದ್ದಾರೆ. ಚನ್ನಗಿರಿಯಿಂದ ಶೃಂಗೇರಿ ಕಡೆಗೆ ಸ್ವಿಫ್ಟ್ ಕಾರಿನಲ್ಲಿ 6 ಜನರು ತೆರಳುತ್ತಿದ್ದರು. ಮಂಗಳೂರಿನಿಂದ ರಾಯಚೂರು ಕಡೆಗೆ ಕೆಎಸ್‌ಆರ್‌ಟಿಸಿ ಬಸ್ ಹೋಗುತ್ತಿತ್ತು. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಬಸ್ಸಿನ ಮುಂಭಾಗಕ್ಕೆ ಹಾನಿಯಾಗಿದೆ. ಗಾಯಾಳುಗಳಿಗೆ ತೀರ್ಥಹಳ್ಳಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ವರ್ತಮಾನ ಜಾಹಿರಾತಿಗೆ ಉತ್ತಮ ಮಾಧ್ಯಮ

ಕೆ.ಆರ್.ಎಸ್ ಪ್ರವಾಸಿ ತಾಣದಲ್ಲಿ ತಂಬಾಕು ನಿಯಂತ್ರಣದ ಕೋಟ್ಪಾ ಕಾರ್ಯಾಚರಣೆ

ಶ್ರೀರಂಗಪಟ್ಟಣ: ತಾಲೂಕಿನ ಕೆ.ಆರ್.ಎಸ್ ಪ್ರವಾಸಿ ತಾಣದ ವ್ಯಾಪ್ತಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಂಡ್ಯ, ಜಿಲ್ಲಾ ಎನ್ಫೋರ್ಸ್ಮೆಂಟ್ ಅಧಿಕಾರಿಗಳ ಕಛೇರಿ, ಮಂಡ್ಯ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಮಂಡ್ಯ, ತಾಲೂಕು ಆರೋಗ್ಯಾಧಿಕಾರಿಗಳ ಕಛೇರಿ, ಶ್ರೀರಂಗಪಟ್ಟಣ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆ.ಆರ್.ಎಸ್ ಹಾಗೂ ಕೆ.ಆರ್.ಎಸ್ ಪೊಲೀಸ್ ಠಾಣೆಗಳ ಸಹಭಾಗಿತ್ವದಲ್ಲಿ ನಿಯಮಬಾಹಿರ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಬಳಕೆಯ ವಿರುದ್ಧ ಕೋಟ್ಪಾ ಕಾಯ್ದೆ ನಿಯಮಗಳಡಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು.

ಡಿಹೆಚ್ಓ ಡಾ. ಮೋಹನ್ ಕೆ ಹಾಗೂ ಜಿಲ್ಲಾ ಎನ್ಫೋರ್ಸ್ಮೆಂಟ್ ಅಧಿಕಾರಿ ಡಾ. ಬೆಟ್ಟಸ್ವಾಮಿ ರವರ ಮಾರ್ಗದರ್ಶನದಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆ.ಆರ್.ಎಸ್ ನ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಪ್ರಫುಲ್ಲ ರವರ ನೇತೃತ್ವದಲ್ಲಿ ಈ ಕಾರ್ಯಚರಣೆ ಜರುಗಿತು.

ಕಾರ್ಯಾಚರಣೆಯಲ್ಲಿ ಸೆಕ್ಷನ್ 4ರ ಅಡಿಯಲ್ಲಿ 48 ಪ್ರಕರಣಗಳನ್ನು ದಾಖಲಿಸಿ ರೂ.5,700 ದಂಡ, ಸೆಕ್ಷನ್ 6ಎ ಅಡಿಯಲ್ಲಿ 1 ಪ್ರಕರಣಗಳಿಗೆ ರೂ.100 ದಂಡ ಹಾಗೂ ಸೆಕ್ಷನ್ 6ಬಿ ಅಡಿಯಲ್ಲಿ 3 ಪ್ರಕರಣಗಳಿಗೆ ರೂ. 300 ದಂಡ ವಿಧಿಸಲಾಯಿತು. ಒಟ್ಟಾರೆ 52 ಪ್ರಕರಣಗಳನ್ನು ದಾಖಲಿಸಿ ರೂ.6,100 ದಂಡ ವಿಧಿಸಲಾಯಿತು.

ಕಾರ್ಯಾಚರಣೆಯಲ್ಲಿ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಪ್ರಫುಲ್ಲ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ತಿಮ್ಮರಾಜು, ಶ್ರೀರಂಗಪಟ್ಟಣ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಬೆನ್ನೂರ, ಸಮಾಜ ಕಾರ್ಯಕರ್ತ ಮೋಹನ್ ಕುಮಾರ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಯರಾಮು ಹಾಗೂ ಆರಕ್ಷಕರಾದ ಶ್ರೀಕಂಠಪ್ರಸಾದ್ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಿ ತಂಬಾಕು ಬಳಕೆಯ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಲಾಯಿತು. ಮುಂದಿನ ದಿನಗಳಲ್ಲಿ ನಿಯಮಬಾಹಿರವಾಗಿ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಬಳಕೆ ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಅಂಗಡಿ ಮಾಲೀಕರಿಗೆ ಎಚ್ಚರಿಕೆ ನೀಡಲಾಯಿತು.

ಶಾಲೆ?ಕಾಲೇಜುಗಳ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳ ಮಾರಾಟ ಮತ್ತು ಬಳಕೆ ಸಂಪೂರ್ಣ ನಿಷೇಧವಾಗಿರುವುದನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಯಿತು.

ಒಕ್ಕಲಿಗ ಯುವ ಬ್ರಿಗೇಡ್‌ನ ಅಧ್ಯಕ್ಷ ನಂಜೇಗೌಡ ನಂಜುಂಡ ಕೊಡುಗೆ

ವಸತಿ ಶಾಲೆಗೆ 2 ಕಂಪ್ಯೂಟರ್ ವಿತರಣೆ

ತುಮಕೂರು: ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ, ಪರಮಪೂಜ್ಯ ಜಗದ್ಗುರು ಶ್ರೀ ಡಾ.ಬಾಲಗಂಗಾದರನಾಥ ಮಹಾಸ್ವಾಮೀಜಿ ಅವರ 81ನೇ ಜಯಂತ್ಯುತ್ಸವದ ಅಂಗವಾಗಿ ಸೇವಾ ಸಂಭ್ರಮದ ಕಾರ್ಯಕ್ರಮದ ಅಡಿಯಲ್ಲಿ ಶ್ರೀಕುಂಚಟಿಗರ ಮಹಾಸಂಸ್ಥಾನ ಮಠದ ವಸತಿ ಶಾಲೆಗೆ 2 ಸೆಟ್ ಕಂಪ್ಯೂಟರ್‌ಗಳನ್ನೂ ಉಚಿತವಾಗಿ ನೀಡಲಾಯಿತು.

ಪರಮಪೂಜ್ಯ ಜಗದ್ಗುರು ಶ್ರೀಹನುಮಂತನಾಥ ಮಹಾಸ್ವಾಮೀಜಿ, ಒಕ್ಕಲಿಗ ಯುವ ಬ್ರಿಗೇಡ್‌ನ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿ, ಆಶೀರ್ವಾದ ಮಾಡಿದರು. ಒಕ್ಕಲಿಗ ಯುವ ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ಮಾತನಾಡಿ ಅನ್ನ, ಅಕ್ಷರ ಮತ್ತು ಅವಕಾಶ ಕಲ್ಪಿಸುವ ಸಂಕಲ್ಪದೊಂದಿಗೆ ಜಾತಿ, ಧರ್ಮದ ಅಂಟಿಲದೆ ಸೇವೆಯನ್ನು ನಿರಂತರವಾಗಿ ಮಾಡುತ್ತಿದ್ದೀವಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಲತಾ, ನಿಶ್ಚಿತ, ಸುರೇಶ ಉಪಸ್ಥಿತರಿದ್ದರು.

ಹಬ್ಬ ಹರಿದಿನಗಳ ಆಚರಣೆ ಹಿಂದೆ ಅದ್ಭುತ ಇತಿಹಾಸಗಳಿವೆ: ನವೀನ್

ಕೆ.ಆರ್ .ನಗರ : ವರ್ಷದ ಮೊದಲ ಹಬ್ಬ ಸಂಕ್ರಾತಿ ಆಚರಿಸಲು ಸಿದ್ಧವಾಗಿರುವ ಜನರಿಗೆ ವಿಜೇತ ಇಂಟರ್ ನ್ಯಾಷನಲ್ ಶಾಲಾ ಮಕ್ಕಳು ಸಂಕ್ರಾಂತಿ ಇತಿಹಾಸ ತಿಳಿಸಿದ್ದು ಮಕ್ಕಳ ಶಿಕ್ಷಣ ಮೌಲ್ಯ ಅದ್ಭುತ ವಾಗಿದೆ ಎಂದು ನ್ಯಾಚುರಲ್ ದೇಸಿರಿ ಗಾಣದ ಎಣ್ಣೆ ಉತ್ಪಾದನ ವ್ಯವಸ್ಥಾಪಕ ನವೀನ್ ತಿಳಿಸಿದರು ಅವರು ತಾಲೂಕಿನ ಸುಗ್ಗನಹಳ್ಳಿ ವಿಜೇತ ಇಂಟರ್ನ್ಯಾಷನಲ್ ಶಾಲೆಯಲ್ಲಿ ಆಯೋಜಿಸಿದ ಸಂಕ್ರಾಂತಿ ಹಬ್ಬ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತಿಹಾಸ ಪೂರ್ವದಿಂದ ಗುರು ಹಿರಿಯರು ಆಚರಿಸಿಕೊಂಡು ಬರುತ್ತಿರುವ ಹಬ್ಬ ಹರಿದಿನಗಳ ಆಚರಣೆ ಹಿಂದೆ ಅದ್ಭುತ ಇತಿಹಾಸಗಳಿವೆ. ಇದನ್ನು ಸತ್ಯವಾಗಿ ತಿಳಿಯಲು ಗ್ರಾಮೀಣ ಭಾಗದ ಜನರಲ್ಲೇ ಅಡಗಿರುವ ಅದ್ಭುತ ಸತ್ಯಗಳು. ಇಲ್ಲಿಂದಲೇ ಪ್ರಾರಂಭವಾದ ಹಬ್ಬಗಳು ಈಗ ನಾಡಿನದ್ಯಂತ ಬಹು ವಿಜೃಂಭಣೆಯಿಂದ ಆಚರಣೆಗೊಳ್ಳುತ್ತಿವೆ. ಆಚರಣೆಯ ನಿಜವಾದ ಸಾಂಪ್ರದಾಯವನ್ನು ಶಾಲೆಯ ವಿದ್ಯಾರ್ಥಿಗಳು ಪೋಷಕರ ಸಹಕಾರ ಪಡೆದು ಈ ವೇದಿಕೆಯ ಮೂಲಕ

ಸಂಕ್ರಾಂತಿ ಹಬ್ಬ ಆಚರಿಸುತ್ತಿರುವುದು ಗ್ರಾಮೀಣ ಸೊಗಡು ಮರುಕಳಿಸುತ್ತಿದೆ ಎಂದರು.

ಪ್ರತಿ ಶಾಲೆಯಲ್ಲೂ ಮಕ್ಕಳಿಗೆ ಕನ್ನಡ ಇಂಗ್ಲಿಷ್ ಹಿಂದಿ ಸೇರಿದಂತೆ ವಿವಿಧ ರೀತಿಯ ಶಿಕ್ಷಣಗಳು ಸಿಗಬಹುದು ಆದರೆ ಗ್ರಾಮೀಣ ಸಂಸ್ಕೃತಿ ಮತ್ತು ಕುಟುಂಬದ ಪ್ರೀತಿ. ಒಡನಾಟ. ಗ್ರಾಮೀಣ ಶೈಲಿಯ ಆಚರಣೆಗಳು ಸಿಗುವುದಿಲ್ಲ. ಅಂತಹ ಕಲೆಗಳನ್ನು ನೋಡಬೇಕೆಂದರೆ ವಿಜೇತ ಇಂಟರ್ನ್ಯಾಷನಲ್ ಶಾಲೆಯಲ್ಲಿ ಮಾತ್ರ. ನಾನು ಕಂಡಮಟ್ಟಿಗೆ ಓದುವುದರ ಜೊತೆಗೆ ಆಟೋಟ ಸ್ಪರ್ಧೆಗಳು ಜಿಲ್ಲಾ ರಾಜ್ಯ ಮಟ್ಟದ ಕರಾಟೆ ಚಾಂಪಿಯನ್ಗಳು ಈ ಶಾಲೆಯಲ್ಲಿ ಇರುವ ಮಕ್ಕಳಲ್ಲಿ ಉತ್ತಮ ಪ್ರತಿಮೆಗಳು ಅಡಗಿವೆ ನಿಜವಾಗಿಯೂ ಇಂತಹ ಸಾಂಸ್ಕೃತಿಕ ಶಿಕ್ಷಣವು ಪ್ರತಿ ಮಕ್ಕಳಿಗೆ ದೊರಕುವಂತಾಗಬೇಕು ಎಂದರು.

ಏನಿದು ಸಂಕ್ರಾತಿ ಹಬ್ಬ: ಶಾಲಾ ಆವರಣದಲ್ಲಿ. ಗ್ರಾಮೀಣ ಸೊಗಡು ರೀತಿಯ ಬಟ್ಟೆಗಳನ್ನು ಮಕ್ಕಳಿಗೆ ಧರಿಸಿ ಶಿಕ್ಷಕಿಯರು ಸಂಕ್ರಾಂತಿ ಇತಿಹಾಸ ನೆನಪುಮಾಡಿದರು. ಭತ್ತದ ಹುಲ್ಲಿನಲ್ಲಿ ಗುಡಿಸಲು ನಿರ್ಮಿಸಿ ಒಂದು ಕುಟುಂಬ ವಾಸ ಮಾಡುವ ಎಲ್ಲಾ ಸಲಕರಣೆಗಳನ್ನ ಇಟ್ಟು. ವರ್ಷದ ಮೊದಲ ಹಬ್ಬ ಸಂಕ್ರಾಂತಿ ಆಚರಣೆ ಹೇಗಿತ್ತು ಎಂದರೇ ರೈತರು ಬೆಳೆದಿದ್ದ ಭತ್ತ ರಾಗಿ ಕಾಳುಗಳನ್ನು ಕಣದಲ್ಲಿ ರಾಶಿ ಹಾಕಿ ಸೇರು ಪಾವು ಮತ್ತು ಕುಕ್ಕೆ ಮರದಲ್ಲಿ ತುಂಬಿ ಅವುಗಳನ್ನು ಹೂವು ಮತ್ತು ಮಾವಿನ ತೋರಣಗಳಿಂದ ಅಲಂಕರಿಸಿ ಪೂಜಿಸುವ ಸಾಂಪ್ರದಾಯವನ್ನು ಇಲ್ಲಿ ಮಾಡಿದರು. ಸಂಕ್ರಾಂತಿ ಹಬ್ಬಕ್ಕೆ ಇತಿಹಾಸ ಹಿಂದೆ ಆಚರಣೆಯಲ್ಲಿ ಮಾಡುತ್ತಿದ್ದ ಹಬ್ಬದ ಊಟ ರೀತಿಯಲ್ಲಿ ಕಣದಲ್ಲೇ ಓಲೆ ಹಾಕಿ ಗೆಣಸು ಬೇಯಿಸಿ ಎಳ್ಳು ಕಡಬು ಪೊಂಗಲ್ ಈ ರೀತಿ ಊಟ ರೆಡಿ ಮಾಡಿಸಿ ಎಲ್ಲರಿಗೂ ಬಡಿಸಿದರು. ನಂತರ ಕುಟುಂಬದ ಎಲ್ಲ ಸದಸ್ಯರು ಹಸುಗಳಿಗೆ ಅಲಂಕರಿಸಿ ಪೂಜೆ ಮಾಡುವ ಮೂಲಕ ಎತ್ತಿನ ಗಾಡಿ ಕಟ್ಟಿಕೊಂಡು ದೇವಸ್ಥಾನಗಳಿಗೆ ಹೋಗುವ ಪದ್ಧತಿಯನ್ನು ಕಣ್ಮುಂದೆ ಕಾಣುವಂತೆ ತೋರಿಸಿದರು.

ಹಾಗೆಯೇ ದೇಸಿರಿ ನ್ಯಾಚುರಲ್ ಅಡುಗೆ ಎಣ್ಣೆ ಉತ್ಪಾದನೆ ಎತ್ತಿನಗಾಣದಿಂದ ಎಣ್ಣೆಗಳನ್ನು ತೆಗೆದು ಮತ್ತು ಸಿರಿ ಧಾನ್ಯಗಳ ಪ್ರದರ್ಶನವನ್ನು ಮೇಳದಲ್ಲಿ ಇರಿಸಲಾಯಿತು. ಹಾಗೇ ಗ್ರಾಮೀಣ ಪ್ರದೇಶದಲ್ಲಿ ರೈತರು ಬೆಳೆದ ಧಾನ್ಯಗಳನ್ನು ಪೋಷಕರು ತಮ್ಮ ಮಕ್ಕಳ ಮೂಲಕ ಸಂಕ್ರಾಂತಿ ಸಂತೆಯಲ್ಲಿ ಮಾರಾಟಕ್ಕೆ ಇಡಲಾಯಿತು.ಅಕ್ಕ ಪಕ್ಕದ ಗ್ರಾಮಗಳ ಜನರು ಇದನ್ನು ನೋಡಲು ಮುಗಿಬಿದ್ದರು.ನಂತರ ರೈತ ಗೀತೆಗಳಿಗೆ ಶಾಲಾ ಮಕ್ಕಳು ಹಿಂದಿನ ಕಾಲದ ಜನರು ಶೈಲಿಯಲ್ಲಿ ಹುಡುಗೆ ತೊಡುಗೆಗಳನ್ನು ಧರಿಸಿ ನೃತ್ಯ ಮಾಡಿದರು. ಸಂಕ್ರಾಂತಿ ಹಬ್ಬದ ಕಾರ್ಯಕ್ರಮದಲ್ಲಿ ತಾಯಂದಿರು ತಮ್ಮ ಮಕ್ಕಳ ಮೂಲಕ ಎಳ್ಳು ಬೆಲ್ಲದ ಫಲವನ್ನು ಎಲ್ಲರಿಗೂ ವಿತರಿಸಿದರು. ಹಿಂದಿನ ಕಾಲದಲ್ಲಿ ಅಡುಗೆಗೆ ಬಳಸುವ ಒಳಕಲ್ಲು.ರಾಗಿ ಬೀಸುವ ಕಲ್ಲು, ಎಣ್ಣೆ ತೇಗೆಯುವ ಗಾಣ ಇನ್ನಿತರ ಪ್ರಮುಖ ಗೃಹ ಸಾಮಾಗ್ರಿಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು.

ಸಂದರ್ಭದಲ್ಲಿ ಹೊಸ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಲ್ಲಿಕಾರ್ಜುನ್, ವಿಜೇತ ಇಂಟರ್ನ್ಯಾಷನಲ್ ಶಾಲೆಯ ಸಂಸ್ಥಾಪಕ ಹೆಚ್ ಸಿ ಮಹೇಶ್, ವಿಜೇತ ಎಜುಕೇಶನ್ ಟ್ರಸ್ಟ್ ನ ಅಧ್ಯಕ್ಷೆ ಬೇಬಿ ಮಹೇಶ್, ತಾಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷ ಮಹದೇವ್ ಸಿ ಸಿ, ಹೊಸ ಅಗ್ರಹಾರ ವಿ ಎಸ್ ಎಸ್ ಅಧ್ಯಕ್ಷ ರಾಮೇಗೌಡ, ಉದ್ಯಮಿ ಪ್ರಕಾಶ್, ರಘು, ರಾಘವೇಂದ್ರ, ಆಕಾಶ್, ಶಾಲೆಯ ಎಲ್ಲಾ ಶಿಕ್ಷಕಿಯರು ಪೋಷಕರು ಮತ್ತು ಶಿಕ್ಷಕರು ಇದ್ದರು.

ಭಗತ್ ಸಿಂಗ್ ಯುವಸೇನೆ ವತಿಯಿಂದ 2026ನೇ ನೂತನ ವರ್ಷದ ದಿನದರ್ಶಿಕೆ ಬಿಡುಗಡೆ

ಚಾಮರಾಜನಗರ: ತಾಲೂಕಿನ ಚಂದಕವಾಡಿ ಗ್ರಾಮದ ಶ್ರೀ ಲಕ್ಷ್ಮಿ ದೇವಿ ಅಮ್ಮನವರ ದೇವಸ್ಥಾನದ ಆವರಣದಲ್ಲಿಭಗತ್ ಸಿಂಗ್ ಯುವಸೇನೆ ವತಿಯಿಂದ 2026ನೇ

ನೂತನ ವರ್ಷದ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು.

ಇದೇವೇಳೆ ಅಧ್ಯಕ್ಷ ಕೋಡಿಮೋಳೆ ಕಾಂತರಾಜು ಮಾತನಾಡಿ, ಭಗತ್ ಸಿಂಗ್ ಯುವಸೇನೆ ವತಿಯಿಂದ ಕಳೆದ ಎಂಟು ವರ್ಷಗಳಿಂದ ಸಮಾಜಮುಖಿ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದು, ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಣೆ, ಗಿಡ ನೆಡುವ ಕಾರ್ಯಕ್ರಮ, ಮಕ್ಕಳ ಕ್ರೀಡಾಕೂಟಗಳ ಆಯೋಜನೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಮಾಡುವುದು, ಸ್ವಚ್ಛತೆ ಹಾಗೂ ಆರೋಗ್ಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಸೇರಿದಂತೆ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಸಹ ಸಮಾಜ ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲಿ ಶ್ರಮಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ದೇವಸ್ಥಾನ ಅರ್ಚಕರಾದ ಮಹೇಶ್, ರಾಜಪ್ಪ,ಶಿವರಾಜ್,ಮನು, ಪ್ರಜ್ವಲ್, ಇತರರು ಹಾಜರಿದ್ದರು.

ಜೆಡಿಎಸ್ ವತಿಯಿಂದ ನೂತನ ಜಿಲ್ಲಾಧಿಕಾರಿ ಶ್ರೀರೂಪ ಗೆ ಸನ್ಮಾನ

ಚಾಮರಾಜನಗರ: ನೂತನ ಜಿಲ್ಲಾಧಿಕಾರಿಯಾದ ಶ್ರೀರೂಪ ಅವರನ್ನು ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ವತಿಯಿಂದ ಸನ್ಮಾನಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿ ಪಕ್ಷದ ಮುಖಂಡ ಆಲೂರು ಮಲ್ಲು ಅವರ ನೇತೃತ್ವದಲ್ಲಿ ಭೇಟಿ ಮಾಡಿ ಅವರಿಗೆ ಶಾಲು ಹೊದಿಸಿ, ಹಾರಹಾಕಿ, ಮೈಸೂರು ಪೇಟ ತೊಡಿಸಿ, ಫಲತಾಂಬೂಲ ನೀಡಿ ಮಕರ ಸಂಕ್ರಾಂತಿ ಹಬ್ಬದ ಶುಭಾಶಯ ಕೋರಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಟೌನ್ ಅಧ್ಯಕ್ಷ ಜಿ.ಎಂ.ಶಂಕರ್, ಹೊಂಗನೂರು ಶಿವಕುಮಾರ್, ಪಣ್ಯದಹುಂಡಿ ನಾಗರಾಜು, ಹೊನ್ನಹಳ್ಳಿ ಬಸವಣ್ಣ, ದೊಡ್ಡರಾಯಪೇಟೆ ಮಹೇಶ್ ಗೌಡ, ಹರದನಹಳ್ಳಿ ರಾಮಚಂದ್ರ ನಾಯಕ, ಹೊಂಗನೂರು ರಾಜಣ್ಣ, ಹೊಂಡರಬಾಳು, ಮುರುಗೇಶ್, ಆಲೂರು ನಂದೀಶ್, ಮೇಗಲಹುಂಡಿ ಪಾಪಣ್ಣ ಹಾಜರಿದ್ದರು.

ಮೈಸೂರಲ್ಲೂ ಶಿವಸೇನೆ ಪಕ್ಷಕ್ಕೆ ಚಾಲನೆ

ಮೈಸೂರು: ಮಹಾರಾಷ್ಟ್ರದಲ್ಲಿ ಪ್ರಾಬಲ್ಯ ಹೊಂದಿರುವ ಶಿವಸೇನೆ ಕರ್ನಾಟಕದಲ್ಲೂ ತನ್ನ ವ್ಯಾಪ್ತಿ ವಿಸ್ತರಿಸಿದ್ದು, ರಾಜ್ಯದ 13ನೇ ಜಿಲ್ಲೆಯಾಗಿ ಮೈಸೂರಿನಲ್ಲಿಯೂ ತನ್ನ ಘಟಕ ಆರಂಭಿಸಿದೆ.

ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ ಕುಲಕರ್ಣಿ ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜ್ಯದಲ್ಲಿ ಪಕ್ಷವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಿಂದೂ ವಿರೋಧೀ ನೀತಿ ವಿರುದ್ಧ ಧ್ವನಿಯೆತ್ತಲಿದೆ. ಸೆಂದಿಲ್ ಕುಮಾರ್ ಜಿಲ್ಲಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ ಮಾಡಲಿದ್ದಾರೆ. ರಾಜ್ಯದಲ್ಲಿ ನಡೆಯುವ ಜಿಪಂ, ತಾಪಂ ಹಾಗೂ ಗ್ರಾಪಂ ಚುನಾವಣೆಗಳಲ್ಲಿ ಪಕ್ಷ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಕಾಶ್ಮೀರಿ ಹಿಂದೂಗಳ ಹಕ್ಕಿಗಾಗಿ ಜ. 16 ರಿಂದ 19 ರವರೆಗೆ ಜಮಮುವಿನಲ್ಲಿ ನಡೆಯುವ ಅಧಿವೇಶನದಲ್ಲಿ ರಾಜ್ಯದಿಂದ ಪಕ್ಷದ ಆರು ಮಂದಿ ಪ್ರತಿನಿಧಿಗಳು ಪಾಲ್ಗೊಂಡು, ವಲಸೆ ಹೋಗಿರುವ ಕಾಶ್ಮೀರಿಗಳು ಮರಳಿ ವಾಪಸಾಗಬೇಕೆಂಬ ಬೇಡಿಕೆ, ಅವರಿಗೆ ಸೌಲಭ್ಯ ಕಲ್ಪಿಸಬೇಕೆಂಬುದಕ್ಕೆ ಬೆಂಬಲ ನೀಡಲಿದ್ದಾರೆಂದರು.

ಇದಲ್ಲದೆ, ರಾಜ್ಯದಲ್ಲಿಯೂ ಅಕ್ರಮವಾಗಿ ಬಾಂಗ್ಲಾದಿಂದ ಲಕ್ಷಾಂತರ ಸಂಖ್ಯೆಯಲ್ಲಿ ಜನರು ನುಸುಳಿದ್ದಾರೆ. ಬೆಂಗಳೂರಿನ ಪ್ರಮುಖ ಹೋಟೆಲ್ಗಳಲ್ಲಿ ಅವರೇ ಕೆಲಸದಲ್ಲಿದ್ದಾರೆ. ಬಿಜೆಪಿ ಹಾಗೂ ಮೈತ್ರಿಯೇತರ ರಾಜ್ಯಗಳಲ್ಲಿ ಇವರ ವಿರುದ್ಧ ಮೃದು ಧೋರಣೆ ಅನುಸರಿಸಲಾಗುತ್ತಿದೆ. ಹೀಗಾಗಿ ಇವರನ್ನು ಪತ್ತೆಹಚ್ಚಿ ವಾಪಸು ಕಳಿಸಬೇಕೆಂಬ ಹೋರಾಟ ಪಕ್ಷ ಮಾಡಲಿದೆ ಎಂದು ಮಾಹಿತಿ ನೀಡಿದರು. ರಾಜ್ಯ ವಕ್ತಾರ ಎಸ್.ಭಾಸ್ಕರನ್, ಸೆಂದಿಲ್ಕುಮಾರ್, ಗಂಗಾಧರ್, ಅಮರ್ನಾಥ್, ಬೀರೇಶ್ ಇನ್ನಿತರರು ಇದ್ದರು.

ವಾಹನ ಚಾಲನೆಯಲ್ಲಿ ಪ್ರತಿಯೊಬ್ಬರಿಗೂ ತಾಳ್ಮೆ ಅಗತ್ಯ : ಸಿವಿಲ್ ನ್ಯಾಯಾಧೀಶ ಈಶ್ವರ

ಚಾಮರಾಜನಗರ: ಕರ್ನಾಟ ರಸ್ತೆಯಲ್ಲಿ ವಾಹನ ಚಾಲನೆ ಮಾಡುವ ಪ್ರತಿಯೊಬ್ಬರಿಗೂ ತಾಳ್ಮೆ ಅವಶ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ ಅವರು ಅಭಿಪ್ರಾಯಪಟ್ಟರು.

ಯಡಪುರದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಪ್ರಾದೇಶಿಕ ಸಾರಿಗೆ ಇಲಾಖೆ ಹಾಗೂ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ?37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ? ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಅವಸರವೇ ಅಪಘಾತಕ್ಕೆ ಕಾರಣವಾಗಿದೆ. ಸಂಚಾರಿ ನಿಯಮಗಳ ಪಾಲನೆ, ಜೀವ ರಕ್ಷಣೆ ಹಾಗೂ ರಸ್ತೆ ಸುರಕ್ಷತೆ ಉದ್ದೇಶದಿಂದ ಸಾರ್ವಜನಿಕವಾಗಿ ರಸ್ತೆಯಲ್ಲಿ ವಾಹನ ಸವಾರರು ಎಚ್ಚರಿಕೆಯಿಂದ ಇರಬೇಕು. ತಪ್ಪಿದಲ್ಲಿ ಅಪಘಾತಗಳಾಗುವ ಸಂಭವ ಅಧಿಕವಾಗಿರುತ್ತದೆ. ಇತ್ತೀಚೆಗೆ ವಾಹನಗಳು ಹೆಚ್ಚಾಗುತ್ತಿರುವುದರಿಂದ ಅಪಘಾತಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ವಾಹನ ಚಲಾಯಿಸುವ ಪ್ರತಿಯೊಬ್ಬರು ಸಂಚಾರಿ ನಿಯಮಗಳ ಬಗ್ಗೆ ಅರಿವು ಹೊಂದಬೇಕು. ವಾಹನ ಚಾಲನೆಯಲ್ಲಿ ತಾಳ್ಮೆ ಅಗತ್ಯವಾಗಿದೆ. ಇದರಿಂದ ಅಪಘಾತಗಳನ್ನು ಕಡಿಮೆ ಮಾಡಬಹುದಾಗಿದೆ ಎಂದರು.

ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಂಚಾರಿ ನಿಯಮಗಳು, ರಸ್ತೆ ಸುರಕ್ಷತೆಯ ಜಾಗೃತಿ ಮೂಡಿಸಲು ಪ್ರತಿವರ್ಷ ಜನವರಿ ಮಾಸಾಂತ್ಯದವರೆಗೂ ಕಾರ್ಯಕ್ರಮಗಳನ್ನು ಆಯೋಜಿಸಿ ಸಂಪೂರ್ಣ ಅರಿವು ಮೂಡಿಸಲಾಗುತ್ತಿದೆ. ವಾಹನ ಚಲಾಯಿಸುವವರು ಸಂಬಂಧಿಸಿದ ಚಾಲ್ತಿಯಲ್ಲಿರುವ (ಆರ್.ಸಿ, ಡಿ.ಎಲ್, ಇನ್ಸ್ಯೂರೆನ್ಸ್) ದಾಖಲೆಗಳನ್ನು ಇಟ್ಟುಕೊಂಡಿರಬೇಕು. ಸುರಕ್ಷತಾ ಕವಚ (ಹೆಲ್ಮೆಟ್) ಧರಿಸಿರಬೇಕು. ಇಂದಿನ ಮಕ್ಕಳು, ಯುವಕರು ಭವಿಷ್ಯದ ಪ್ರಜೆಗಳು ಹಾಗೂ ದೇಶದ ಆಸ್ತಿಯಾಗಿದ್ದಾರೆ. ಮಕ್ಕಳು ವಿದ್ಯಾರ್ಥಿದೆಸೆಯಲ್ಲಿಯೇ ಕಾನೂನು ಅರಿವು ಪಡೆದು ಸಂಚಾರಿ ನಿಯಮಗಳನ್ನು ಪಾಲಿಸಬೇಕು ಎಂದು ಅವರು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ ಅವರು ರಸ್ತೆ ಅಪಘಾತಗಳ ಪರಿಣಾಮಕಾರಿ ತಡೆಗೆ ಪ್ರಾದೇಶಿಕ ಸಾರಿಗೆ ಇಲಾಖೆ ವತಿಯಿಂದ ಪ್ರತಿವರ್ಷ ಜನವರಿ ತಿಂಗಳಿನಲ್ಲಿ ಶಾಲಾ–ಕಾಲೇಜು, ಹೆಚ್ಚು ಜನಸಂದಣಿ ಇರುವ ಸ್ಥಳದಲ್ಲಿ ರಸ್ತೆ ಸುರಕ್ಷತೆ ಹಾಗೂ ಸಂಚಾರಿ ನಿಯಮಗಳ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಿ ವ್ಯಾಪಕ ಜನಜಾಗೃತಿ ಮೂಡಿಸಲಾಗುತ್ತಿದೆ. ಕಾರ್ಯಕ್ರಮವನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಸಂಚಾರಿ ನಿಯಮಗಳನ್ನು ನಾಗರಿಕರು ಕಡ್ಡಾಯವಾಗಿ ಪಾಲಿಸಲು ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಾರಿಗೆ ಇಲಾಖೆಯ ಮೋಟಾರು ವಾಹನ ನಿರೀಕ್ಷಕಿ ರಶ್ಮಿ ಅವರು ರಸ್ತೆ ಸುರಕ್ಷತೆಯ ಸಂಚಾರಿ ನಿಯಮಗಳು, ಮುನ್ನೆಚ್ಚರಿಕೆ ರಸ್ತೆ ಚಿಹ್ನೆಗಳು, ಕಡ್ಡಾಯ ರಸ್ತೆ ಚಿಹ್ನೆಗಳು ಮತ್ತು ಮಾಹಿತಿ ರಸ್ತೆ ಚಿಹ್ನೆಗಳ ಕುರಿತು ಸವಿವರವಾಗಿ ಮಾಹಿತಿ ನೀಡಿದರು. ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ಮೂಲಕ ರಸ್ತೆ ಸುರಕ್ಷತೆಯ ತಿಳುವಳಿಕೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕರಾದ ಸುರೇಶ್‌ಕುಮಾರ್, ಪ್ರಾದೇಶಿಕ ಸಾರಿಗೆ ಇಲಾಖೆಯ ಅಧೀಕ್ಷಕರಾದ ಕಮರಶೆಟ್ಟಿ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಬಿಜೆಪಿ ರೈತ ಮೋರ್ಚಾ ಪದಾಧಿಕಾರಿಗಳ ನೇಮಕ

ಕಾಂಗ್ರೆಸ್ ರೈತ ವಿರೋಧಿ ನೀತಿ ವಿರುದ್ದ ಸಂಘಟಿತ ಹೋರಾಟ ಅಗತ್ಯ : ಬೇಡರಪುರ ಬಸವಣ್ಣ

ಚಾಮರಾಜನಗರ: ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ಬಡವರು ಹಾಗೂ ರೈತರನ್ನು ಶೋಷಣೆ ಮಾಡುತ್ತಿದೆ. ಬಹಳಷ್ಟು ಯೋಜನೆಗಳಿಗೆ ಅನುದಾನವನ್ನು ನೀಡದೆ, ರೈತರು ಅಭಿವೃದ್ಧಿ ಕುಂಠಿತವಾಗುತ್ತಿದೆ. ಇದರ ವಿರುದ್ಧ ಬಿಜೆಪಿ ರೈತ ಮೋರ್ಚಾದಿಂದ ಜನ ಜಾಗೃತಿ ಮೂಡಿಸುವ ಜೊತೆಗೆ ಸಂಘಟಿತವಾಗಿ ಹೋರಾಟ ಮಾಡೋಣ ಎಂದು ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಬೇಡರಪುರ ಬಸವಣ್ಣ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ರೈತ ಮೋರ್ಚಾದ ನೂತನ ಪದಾಧಿಕಾರಿಗಳಿಗೆ ಅದೇಶ ಪ್ರತಿಯನ್ನು ನೀಡಿ, ರೈತ ಮೋರ್ಚಾ ಕಾರ್ಯಕಾರಿಣಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ರೈತ ಪರವಾದ ಯೋಜನೆಗಳನ್ನು ರೈತರಿಗೆ ಹೆಚ್ಚಿನ ಮಟ್ಟದಲ್ಲಿ ತಲುಪಿಸುವ ನಿಟ್ಟಿನಲ್ಲಿ ಕಾರ್ಯನ್ಮುಖರಾಗಬೇಕಾಗಿದೆ. ರೈತ ಸನ್ಮಾನ ಯೋಜನೆಯಲ್ಲಿ ಪ್ರತಿ ರೈತರಿಗೆ ಹಣ ನೇರವಾಗಿ ವರ್ಗಾವಣೆಯಾಗುತ್ತಿರುವ ಬಗ್ಗೆ ಆಯಾ ವ್ಯಾಪ್ತಿಯಲ್ಲಿ ಖಾತರಿ ಪಡಿಸಿಕೊಳ್ಳಿ, ಸಾವಯವ ಕೃಷಿಗೆ ಹೆಚ್ಚಿನ ಉತ್ತೇಜನ ಸೇರಿದಂತೆ ಬಹಳಷ್ಟು ಯೋಜನೆಗಳು ಕೇಂದ್ರದಲ್ಲಿ ಅನುಷ್ಠಾನವಾಗುತ್ತಿವೆ. ಇವುಗಳ ಫಲಾನುಭವಿಗಳನ್ನು ಅರ್ಜಿ ಹಾಕಿಸುವ ಜೊತೆಗೆ ಸವಲತ್ತು ಕಲ್ಪಿಸುವ ಕೆಲಸವನ್ನು ರೈತ ಮೋರ್ಚಾದ ಪದಾಧಿಕಾರಿಗಳು ನಮ್ಮ ವ್ಯಾಪ್ತಿಯಲ್ಲಿ ಮಾಡೋಣ ಎಂದರು.

ರೈತ ಮೋರ್ಚಾ ಪದಾಧಿಕಾರಿಗಳ ವಿವರ : ಬಿಜೆಪಿ ರೈತ ಮೋರ್ಚಾ ಜಿಲ್ಲಾ ಪ್ರಧಾನಕಾರ್ಯದರ್ಶಿಗಳಾಗಿ ಹೊನ್ನಹಳ್ಳಿ ಆರ್. ಪುರುಷೋತ್ತಮ್, ಕೊಮಾರನಪುರ ಚಂದ್ರಶೇಖರ್, ಉಪಾಧ್ಯಕ್ಷರಾಗಿ ಜ್ಯೋತಿಗೌಡನಪುರದ ಜಿ.ಪಿ. ದೊರೆಸ್ವಾಮಿ, ಉಡಿಗಾಲ ಚಂದ್ರಶೇಖರಪ್ಪ, ಯಾನಗಹಳ್ಳಿ ಎಂ. ಮಹದೇವಸ್ವಾಮಿ, ದೇವರಹಳ್ಳಿ ಎಲ್. ಮಹೇಶ್. ಶಾಗ್ಯ ಜಿ.ರಾಚಪ್ಪ ಅವರನ್ನು ನೇಮಕ ಮಾಡಿಕೊಳ್ಳಲಾಯಿತು.

ಕಾರ್ಯದರ್ಶಿಗಳಾಗಿ ಮರಿಯಾಲ ಮಹೇಶ್, ರಾಮಾಪುರ ಸಿ. ನವೀನ್, ಮಾದಾಪುರ ಎಂ. ಸಿ. ಪುಟ್ಟನಂಜಪ್ಪ, ಇಕ್ಕಡಹಳ್ಳಿ ಬಸವಣ್ಣ, ಅಟ್ಟುಗೂಳಿಪುರ ಮಹೇಶ್‌ಕುಮಾರ್ ಹಾಗೂ ಖಜಾಂಚಿಯಾಗಿ ಕಿಲಗೆರೆ ಡಿ. ಶ್ರೀಕಂಠಪ್ಪ ಅವರನ್ನು ನೇಮಕ ಮಾಡಲಾಗಿದೆ ಎಂದು ಬಸವಣ್ಣ ತಿಳಿಸಿದರು.

ನೂತನ ಪದಾಧಿಕಾರಿಗಳು ಜಿಲ್ಲೆಯಲ್ಲಿ ಬಿಜೆಪಿ ರೈತ ಮೋರ್ಚಾವನ್ನು ಸಂಘಟನೆ ಮಾಡುವ ಮೂಲಕ ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿ, ರೈತ ಪರವಾದ ಕೆಲಸ ಕಾರ್ಯಗಳು ಹೆಚ್ಚು ನಡೆಯುವಂತೆ ಮಡಬೇಕು ಎಂದರು.

ಸಭೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ, ರೈತ ಮೋಚಾ ಪ್ರಭಾರಿ ಶಿವಕುಮಾರ್ ಬುದಿತಿಟ್ಟು ಹಾಗು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂಕ್ರಾಂತಿಯ ಶುಭ ಸಂದರ್ಭದಲ್ಲಿ ಬನ್ನಿ ಕೈಗೊಳ್ಳೋಣ `ಸಂ'ಕ್ರಮಣವನ್ನು

ಸಂಕ್ರಾಂತಿ ಎಂದರೆ ಸಂಕ್ರಮಣದ ಕಾಲ ಬದುಕಿನಲ್ಲಿ ಬರುವ ಸುಖ-ದುಃಖ, ನೋವು-ನಲಿವು ಸೋಲು-ಗೆಲುವು ಹೀಗೆ ಎಲ್ಲವನ್ನು ಸಮಚಿತ್ತದಿಂದ ಸ್ವೀಕರಿಸುವ ಕಾಲ.

ಕೆಲ ಅನವಶ್ಯಕ ಅಭ್ಯಾಸಗಳನ್ನು ನಾವು ನಿರಂತರವಾಗಿ ಪಾಲಿಸಿಕೊಂಡು ಬಂದಿರುತ್ತೇವೆ. ಇನ್ನು ಕೆಲವು ನಾವು

ಬಿಟ್ಟೇನೆಂದರೂ ಬಿಡದೆ ನಮ್ಮೊಂದಿಗೆ ಇರುತ್ತವೆ. ಇನ್ನೂ ಕೆಲವು ಅಭ್ಯಾಸಗಳನ್ನು ಸಾಮಾಜಿಕ ಮನ್ನಣೆಯ ಕಾರಣದಿಂದ ನಾವು ನಿಭಾಯಿಸಬೇಕಾಗುತ್ತದೆ. ಮತ್ತೆ ಕೆಲವು ಒಳ್ಳೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕಾಗಿರುತ್ತದೆ. ಉತ್ತಮ ಅಭ್ಯಾಸಗಳು ವ್ಯಕ್ತಿಯ ವೈಯುಕ್ತಿಕ,ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಉತ್ತಮ ದೈಹಿಕ ಆರೋಗ್ಯ, ಮಾನಸಿಕ ಸಂತೃಪ್ತಿಯನ್ನು ಕೊಡುತ್ತದೆ.

ಬನ್ನಿ ಈ ಸಂಕ್ರಮಣ ಕಾಲದಲ್ಲಿ ಅಂತಹ ಹಲವು ಅಭ್ಯಾಸಗಳ ಕುರಿತು ಧೇನಿಸೋಣ. ಮೈಗೂಡಿಸಿಕೊಳ್ಳೋಣ, ಅನುಷ್ಠಾನಕ್ಕೆ ತರೋಣ.. ನೀರು....ನಮ್ಮ ಬಾಳಿನಲ್ಲಿ ಅತ್ಯಂತ ಅವಶ್ಯಕ ಪಾತ್ರವನ್ನು ವಹಿಸುತ್ತದೆ. ನಮ್ಮ ದೇಹದ ಶೇಕಡಾ 60 ಭಾಗ ನೀರು ತುಂಬಿಕೊಂಡಿದೆ. ಆದರೂ ಕೂಡ ಅವಶ್ಯಕ ಪ್ರಮಾಣದ ನೀರು ಸೇವನೆ ಮಾಡದೆ ಇರುವುದರಿಂದ ನಾವು ಆಮ್ಲ ಪಿತ್ತ, ಹುಳಿತೇಗು, ಹೊಟ್ಟೆ ಉಬ್ಬರ, ವಾಯು ಬಾಧೆ ಮತ್ತು ಕರುಳಿನಲ್ಲಿ ಜೀರ್ಣಗೊಂಡ ಶೇಷದ ಅಸಮರ್ಪಕ ಚಲನೆಗೆ ಮತ್ತು ಮಲಬದ್ಧತೆಯ ಸಮಸ್ಯೆಗೆ ಕಾರಣವಾಗುತ್ತದೆ ಆದ್ದರಿಂದ ಕನಿಷ್ಠ 8 ಲೋಟಗಳಷ್ಟು ಅಂದರೆ ಸುಮಾರು ಎರಡುವರೆ ಲೀಟರ್ ನಷ್ಟು ನೀರನ್ನು ಪ್ರಯತ್ನಪೂರ್ವಕವಾಗಿ ಕುಡಿಯುವ ಸಂಕಲ್ಪ ಮಾಡಿರಿ

ಆಹಾರ....ಆಹಾರ ಕೂಡ ನಮ್ಮ ಮೂಲಭೂತ ಅವಶ್ಯಕತೆಗಳಲ್ಲಿ ಒಂದು ಮತ್ತು ಆಹಾರ ಸಂಪಾದನೆಗಾಗಿ ದುಡಿಯುವುದು ಮನುಷ್ಯನ ಜೀವನದ ಅವಿಭಾಜ್ಯ ಕರ್ತವ್ಯ. ಸಿಕ್ಕಲ್ಲಿ, ಸಿಕ್ಕಷ್ಟು, ಸಿಕ್ಕು ಸಿಕ್ಕಂತೆ ತಿಂದು ಮೈ ಬೆಳಸಿಕೊಳ್ಳುವುದು ಸರಿಯಲ್ಲ. ನಮ್ಮ ದೇಶದ ಎಷ್ಟೋ ಜನರು ಒಂದು ಹೊತ್ತಿನ ಸಂಪೂರ್ಣ ಆಹಾರಕ್ಕಾಗಿ ಇಂದಿಗೂ ಒದ್ದಾಡುತ್ತಾರೆ. ಸಾವಿರಾರು ಮಕ್ಕಳು ಪ್ರತಿದಿನ ಅಪೌಷ್ಟಿಕತೆಯಿಂದ ನರಳುತ್ತಾರೆ ಮತ್ತು ಸಾಯುತ್ತಾರೆ ಕೂಡ. ಅಂತದ್ದರಲ್ಲಿ ಆಹಾರವನ್ನು ಪೋಲು ಮಾಡದೆ ನಿಯಮಿತವಾಗಿ ಆಹಾರ ಸೇವಿಸಬೇಕು. ಆಹಾರವನ್ನು ಹೆಚ್ಚು ಹೆಚ್ಚು ತಯಾರಿಸದೆ ತಯಾರಿಸಿದ ಆಹಾರವನ್ನು ತಂಗಳು ಪೆಟ್ಟಿಗೆಗೆ ತುಂಬದೆ, ತುಂಬಿದ ಕಾರಣಕ್ಕಾಗಿಯೇ ಅದನ್ನು ಪದೇ ಪದೇ ಬಿಸಿ ಮಾಡಿ ಸೇವಿಸುವ ಕರ್ಮ ಬೇಕಾಗಿಲ್ಲ. ಸಮಯಕ್ಕೆ ಸರಿಯಾಗಿ ನಮ್ಮ ಅವಶ್ಯಕತೆಗೆ ತಕ್ಕಷ್ಟು ತಾಜಾ ಆಹಾರವನ್ನು ತಯಾರಿಸಿ ಸೇವಿಸುವ ಸಂಕಲ್ಪವನ್ನು ಮಾಡಿರಿ. ಆದಷ್ಟು ಹೊರಗಿನ ಆಹಾರವನ್ನು ತ್ಯಜಿಸಿರಿ.

ನಡಿಗೆ.... ನಮ್ಮ ಜೀವನದ ಇನ್ನೊಂದು ಮುಖ್ಯ ಸಂಕಲ್ಪವಾಗಿರಲಿ. ಇತ್ತೀಚಿನ ವರದಿಗಳ ಪ್ರಕಾರ ನಮ್ಮನ್ನು ಕಟ್ಟಿ ಹಾಕಿರುವುದು ಕೇವಲ ಆಹಾರ, ವ್ಯಾಯಾಮರಹಿತ ಜೀವನ ಶೈಲಿ ಮಾತ್ರವೇ ಅಲ್ಲ ಕುರ್ಚಿಯು ಕೂಡ ನಮ್ಮನ್ನು ಕಟ್ಟಿ ಹಾಕಿದೆ. ದೀರ್ಘಕಾಲ ಕುಳಿತೇ ಕಾರ್ಯನಿರ್ವಹಿಸುವುದರಿಂದ ಮೊಣಕಾಲು ಗಂಟು ಹಿಡಿದಂತಾಗಿ ಸೆಳೆತ ಉಂಟಾಗುತ್ತದೆ. ಸತತವಾಗಿ ಕುಳಿತುಕೊಂಡೇ ಇರುವುದನ್ನು ಅಭ್ಯಾಸ ಮಾಡಿಕೊಂಡರೆ ಪೃಷ್ಠ ಮತ್ತು ಸೊಂಟದ ಭಾಗದಲ್ಲಿ ಬೊಜ್ಜು ಆವರಿಸಿಕೊಳ್ಳುತ್ತದೆ. ಹೊಟ್ಟೆಯ ಬೊಜ್ಜು ಇದಕ್ಕೆ ಸೇರಿಕೊಂಡರೆ ಮನುಷ್ಯನ ದೇಹದ ವಿವಿಧ ಅಂಗಗಳು ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ಮುಷ್ಕರ ಹೂಡುತ್ತವೆ. ಆದ್ದರಿಂದ ಪ್ರತಿ ಅರ್ಧ ಗಂಟೆಗೊಮ್ಮೆ ನೀವು ಕುಳಿತ ಜಾಗದಿಂದ ಎದ್ದು ಕೆಲವು ಹೆಜ್ಜೆ ನಡೆಯುವುದು ಒಳಿತು. ದಿನಕ್ಕೆ ಅತ್ಯಂತ ಕಡಿಮೆ ಎಂದರು ಏಳೆಂಟು ಸಾವಿರ ಹೆಜ್ಜೆಗಳ ನಡಿಗೆಯ ಗುರಿ ನಿಮ್ಮದಾಗಿರಲಿ.

ಧ್ಯಾನ... ದೈಹಿಕ ಆರೋಗ್ಯದ ಜೊತೆ ಜೊತೆಗೆ ಮಾನಸಿಕ ಆರೋಗ್ಯವು ಮನುಷ್ಯನಿಗೆ ಬೇಕೇ ಬೇಕು. ದಾವಂತದ ಈ ಬದುಕಿನಲ್ಲಿ ನಮಗೆ ಧ್ಯಾನದ ಕುರಿತ ಒಲವು ಕಡಿಮೆ. ಧ್ಯಾನ ಎನ್ನುವುದು ಕೈಗೆ ಸಿಕ್ಕದ ಕನಸಿನ ಕನ್ಯೆ. ಆದರೆ ಸತತವಾಗಿ ಆಕೆಯ ಹಿಂದೆ ಬಿದ್ದರೆ ಆಕೆ ನಮ್ಮ ಕೈ ಹಿಡಿಯುತ್ತಾಳೆ

| ವೀಣಾ ಹೇಮಂತ್‌ಗೌಡ ಪಾಟೀಲ್

ನಮ್ಮನ್ನು ತನ್ನ ಶಾಂತಿ ಸಮಾಧಾನಗಳ ಉಯ್ಯಾಲೆಯಲ್ಲಿಟ್ಟು ತೂಗುತ್ತಾಳೆ, ಪೊರೆಯುತ್ತಾಳೆ. ಧ್ಯಾನದಿಂದ ಒತ್ತಡಕ್ಕೆ ತಡೆ ಹಾಕಬಹುದು. ಆದ್ದರಿಂದ ದಿನದಲ್ಲಿ ಒಂದೇ ಬಾರಿ 10 ರಿಂದ 20 ನಿಮಿಷಗಳ ಕಾಲ ಧ್ಯಾನ ಮಾಡಲಾಗದಿದ್ದರೂ ಸಹ ಎರಡು ಗಂಟೆಗೊಮ್ಮೆ ನಾಲ್ಕೈದು ನಿಮಿಷ

ಕಾಲ ಏನನ್ನು ಮಾಡದೆ ಕಣ್ಣು ಮುಚ್ಚಿ ದೇಹದ ಮತ್ತು ಉಸಿರಾಟದಲ್ಲಾಗುವ ಬದಲಾವಣೆಗಳನ್ನು ಗಮನಿಸಿ. ಮತ್ತು ಧ್ಯಾನಿಸುವುದನ್ನು ದೈನಂದಿನ ಕ್ರಿಯೆಯಾಗಿ ರೂಢಿಯಲ್ಲಿ ತನ್ನಿ ಒತ್ತಡವನ್ನು ದೂರವಿರಿಸಿ.

ಒಳ್ಳೆಯ ನಿದ್ರೆ... ದಿಂಬಿನ ಮೇಲೆ ತಲೆ ಇಟ್ಟರೆ ಸಾಕು ಸುಖವಾದ ನಿದ್ರೆ ಬರಲು ಎಂಬಂತಹ ಮನಸ್ಥಿತಿಯನ್ನು ಹೊಂದಿರಬೇಕು. ಉತ್ತಮ ಆರೋಗ್ಯ, ಸುಮಧುರವಾದ ಕೌಟುಂಬಿಕ ಬಾಂಧವ್ಯಗಳು, ಆರೋಗ್ಯಕರ ಹವ್ಯಾಸಗಳು, ಮನುಷ್ಯನಿಗೆ ಒಳ್ಳೆಯ ನಿದ್ರೆಯನ್ನು ಕೂಡ ತಂದುಕೊಡಬಲ್ಲವು. ನಿದ್ರೆ ನಮ್ಮೆಲ್ಲಾ ಮಾನಸಿಕ ಕ್ಲೇಶಗಳು, ಜಾಡ್ಯಗಳು, ಸಂಕಷ್ಟಗಳು ಮತ್ತು ಅವಿಶ್ರಾಂತ ಕಾರ್ಯ ಚಟುವಟಿಕೆಗಳಿಗೆ ಉತ್ತಮ ಮದ್ದಾಗಿ ಕಾರ್ಯ ನಿರ್ವಹಿಸುವುದರಿಂದ ರಾತ್ರಿ ಸಮಯದಲ್ಲಿ ಮೊಬೈಲ್ ಫೋನನ್ನು ದೂರವಿರಿಸಿ ಒಳ್ಳೆಯ ನಿದ್ರೆಯನ್ನು ಮಾಡುತ್ತೇವೆಂಬ ಸಂಕಲ್ಪವನ್ನು ಮಾಡಬೇಕು.

ಹಳೆಯ ತಪ್ಪುಗಳಿಂದ ಕಲಿಯಿರಿ ಮತ್ತು ಮುನ್ನಡೆಯಿರಿ.... ಎಲ್ಲಾ ತಪ್ಪುಗಳನ್ನು ನಾವೇ ಮಾಡಬೇಕೆಂದಿಲ್ಲ. ಬೇರೆಯವರು ಮಾಡಿರುವ ತಪ್ಪುಗಳಿಂದಲೂ ನಾವು ಪಾಠ ಕಲಿಯಬಹುದು. ಬದುಕಿನಲ್ಲಿ ಹೊಸ ದಿಕ್ಕನ್ನು ತೋರಿಸುವ ಪಾಠಗಳಾಗಬೇಕು ನಮ್ಮ ತಪ್ಪುಗಳು. ತಪ್ಪನ್ನು ತಿದ್ದಿಕೊಳ್ಳುವುದು ಮತ್ತು ಮತ್ತೆ ತಪ್ಪುಗಳೆಸಗದಂತೆ ಮುನ್ನಡೆಯುವುದು ಬದುಕಿನ ಮತ್ತೊಂದು ಮೈಲಿಗಲ್ಲಾಗಬೇಕು.

ಇದರ ಜೊತೆ ಜೊತೆಗೆ ಗಿಡ ನೆಡುವುದು, ಕೈತೋಟದ ನಿರ್ವಹಣೆ, ಮುಂಜಾನೆ ಮತ್ತು ಸಂಜೆಯ ಎಳೆ ಬಿಸಿಲಿನಲ್ಲಿ ನಡಿಗೆ, ನಂಜಿನ ಮಾತುಗಳನ್ನಾಡುವವರನ್ನು ದೂರವಿಡುವುದು, ಚಿಕ್ಕ ಪುಟ್ಟ ಹಂತಗಳಲ್ಲಿ ಯಶಸ್ಸನ್ನು ವಿಂಗಡಿಸಿ ಒಂದೊಂದೇ ಮೆಟ್ಟಿಲುಗಳನ್ನೇರುವುದು, ನಮ್ಮ ಜೊತೆಗಿರುವವರನ್ನು ಸಹ ನಮ್ಮ ಜೀವನ ಪಯಣದಲ್ಲಿ ಕರೆದೊಯ್ಯುವುದು ಹೀಗೆ ಹತ್ತು ಹಲವು ಯೋಜನೆಗಳನ್ನು ಹಾಕಿಕೊಂಡು ಅದರಂತೆಯೇ ನಡೆಯುವ ಸಂಕಲ್ಪಗಳನ್ನು ಮಾಡೋಣ.



ಬನ್ನಿ ಹೊಸ ಸಂ.....ಕ್ರಮಣದತ್ತ ಹೆಜ್ಜೆ ಹಾಕೋಣ

ಮುದ್ಗಾನ್ನ-ಸುಗ್ಗಿಯ ಸಂಕ್ರಾಂತಿ

| ವೀಣಾ ರವಿಕುಮಾರ್



ನಮ್ಮನಾಡಿನ ಕಲೆ, ಸಸಾಂಸ್ಕೃತಿಕ, ಧರ್ಮಾಚರಣೆ, ಹಬ್ಬ-ಸ ಸದಾಚಾರ, ವೈಭೋಗದಿಂದ ಕೂಡಿದ ಸಂಪತ್ಭರಿತವಾದ ನಾಡು , ಸುಗ್ಗಿಯ ಕಾಲ ಎಂದರೆ ಎಲ್ಲಲ್ಲೂ, ಭತ್ತದ ಪೈರು, ಕಡಲೆ, ಜೋಳ, ಕಬ್ಬು, ಕಾಳುಗಳು, ಕೃಷಿಯ ನಾನಾ ಉತ್ಪನ್ನಗಳು ವರ್ಷದ ಬೆಳೆಗಳೊಂದಿಗೆ ಹರ್ಷದಿಂದ ಆಚರಿಸುವ ಸಂಪನ್ನ ಹಬ್ಬ ಸಂಕ್ರಾಂತಿ. ಈ ಮಕರ ಸಂಕ್ರಾಂತಿಯು ಹಿಂದೂ ಧರ್ಮಗಳಲ್ಲೇ ಸಂತೋಷದ ಹಬ್ಬ ಇದಾಗಿದೆ, ಎಳ್ಳು-ಬೆಲ್ಲದೊಂದಿಗೆ ಸಂಬಂಧಗಳ ಬೆಲೆ ಹೆಚ್ಚಿಸುವ ಒಂದು ಆತ್ಮೀಯ ಹಬ್ಬ. ಸೌರಚಕ್ರವನ್ನು ಅವಲಂಭಿಸಿ ಪ್ರತಿ ವರ್ಷ ಜನವರಿ 14 ಅಥ್ವಾ 15ರಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಮುಂಜಾನೆ ಗೋವುಗಳಿಗೆ ಸ್ನಾನ ಮತ್ತು

ಸಜ್ಜನರು ನದಿಗಳಲ್ಲಿ ಸ್ನಾನ ತರ್ಪಣಾದಿಗಳನ್ನು ನೀಡುತಾ, ಸೂರ್ಯನಾರಾಯಣ ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಏಕೆಂದರೆ ನಮ್ಮ ಹಿಂದೂ ಸಂಪ್ರದಾಯಗಳಲ್ಲಿ ಸೂರ್ಯನಿಗೆ ಅತ್ಯಂತ ಪ್ರಾಮುಖ್ಯತೆ ನೀಡಲಾಗಿದೆ.

ಮಕರ ಎಂದರೆ ರಾಶಿಯ ಚಿಹ್ನೆಯಾಗಿದೆ, ಸಂಕ್ರಮಣ ಎಂದರೆ ಒಂದು ಪವಿತ್ರವಾದ ಸೂರ್ಯನ ಕಾಲವಾಗಿದೆ, ಸೂರ್ಯನನ್ನು ಮಕರ ರಾಶಿಗೆ ಬದಲಾಯಿಸುವ ಒಂದು ದೈವೀಕ ಪ್ರಾಮುಖ್ಯತೆಯನ್ನು ಹೊಂದಿದೆ.

ಪವಿತ್ರವಾದ ಗಂಗಾ ಸ್ನಾನ ಮಾಡುವುದರಿಂದ ಸರ್ವಪಾಪ-ದೋಷಾದಿಗಳು ದೂರವಾಗುತ್ತದೆ. ಇದು ಆಧ್ಯಾತ್ಮಿಕ ಬೆಳಕಿನ ಹೆಚ್ಚಳ ಮತ್ತು ಭೌತಿಕ ಕತ್ತಲೆಯ ಕಡಿತವನ್ನು ಸೂಚಿಸುತ್ತದೆ. ವೈಜ್ಞಾನಿಕ ದೃಷ್ಟಕೋನ

ದಿಂದ ನೋಡಿದರೆ ಒಮಕರ ಸಂಕ್ರಾಂತಿಯಿಂದ, ಹಗಲುಗಳು ದೀರ್ಘವಾಗುತ್ತದೆ ಮತ್ತು ರಾತ್ರಿಗಳು ಕಡಿಮೆಯಾಗುತ್ತದೆ. ಅದನ್ನೆ ಉತ್ತರಾಯಣ ಪುಣ್ಯಕಾಲ ಎನ್ನುವರು. ಸಂಕ್ರಾಂತಿಯನ್ನು ಧಾರ್ಮಿಕ ತತ್ವಗಳಿಂದ

ಸ್ವತಂತ್ರವಾಗಿ ಆಚರಿಸಲಾಗುತ್ತದೆಯಾದರೂ ವೇದಾಂಗ ಜ್ಯೋತಿಷ್ಯ ಶಾಸ್ತ್ರದ ತಳಹದಿ ಹೊಂದಿರುವುದರಿಂದ ಮುಖ್ಯವಗಿ ಹಿಂದೂ ಧರ್ಮದವರಿಂದ ಆಚರಿಸಲ್ಪಡುವ ಹಬ್ಬ. ಕರ್ನಾಟಕ ಆಂದ್ರಪ್ರದೇಶ, ತಮಿಳುನಾಡಿನಾದ್ಯಂತ ಆಚರಿಸುವ ಪ್ರಮುಖವಾದ ಹಬ್ಬ. ಇದಕ್ಕೆ ಪರ್ಯಾಯ ಹೆಸರಂದರೆ- ಮಾಘಮೇಳ, ಮಾಘಿ, ಸಂಕ್ರಮಣ. ಮಹತ್ವತೆ ಏನೆಂದರೆ ಕೊಯ್ಲು ಉತ್ಸವ, ಮುಂದೆ ದಿನಗಳ ಸ್ವಾಗತ,

ಸೂರ್ಯನ ಪೂಜೆ.

ಗಾಲಿಪಟ ಹಾರಿಸುವುದು, ದೀಪೋತ್ಸವಗಳು, ಮೇಳಗಳು ಆಚರಿಸಿ ಸಂಭ್ರಮಿಸಲಾಗಿದೆ. ಉತ್ತರಾಯಣ ಪುಣ್ಯಕಾಲದಲ್ಲಿ ಅಧಿಕಾರಯುಕ್ತ ಸದ್ಭಕ್ತರು ಪಿತೃತರ್ಪಣ ನೀಡುವರು, ಇದರಿಂದ ಜನ್ಮ-ಜನ್ಮಗಳಲ್ಲೂ

ವಂಶ ಉದ್ಧಾರದ ಜೊತೆಗೆ ಧರ್ಮಾಚರಣೆ ಮಾಡುವ ಸತ್ಪುತ್ರರು, ಮಕ್ಕಳು ಜನಿಸುವರು. ಪಿತೃಗಳಿಗೆ ಪ್ರೀತಿಯುತವಾದ ದಿನ ಉತ್ತರಾಯಣ ಪುಣ್ಯಕಾಲವಾಗಿದೆ, ಮಹಾಭಾರತದಲ್ಲಿ ಇಚ್ಛಾಮರಣಿಯಾದ ಭೀಷ್ಮಾಚಾರ್ಯರು ಸಹ ಈ ಉತ್ತರಾಯಣ ಪುಣ್ಯಕಾಲಕ್ಕಾಗಿ ಕಾದು ದೇಹತ್ಯಾಗ ಮಾಡಿದರು. ಅಷ್ಟು ಪವಿತ್ರವಾದ ಕಾಲವಾಗಿದೆ. ವೇದ-ಪುರಾಣಗಳಲ್ಲಿ ತಿಳಿಸಿದಂತೆ ಒಂದು ಮಹಾ ಪರ್ವಕಾಲವಾಗಿದೆ.

ಭೂಮಿಯ ಉತ್ತರ ಗೋಲಾರ್ಧದ ಅತಿ ಉದ್ದದ ದಿನ ಹಾಗೂ ಅತಿ ಸಣ್ಣ ರಾತ್ರಿ ಪ್ರಮಾಣ ಹೊಂದಿರುವ ಕಾಲಕ್ಕೆ ಭೂಮಿಯ 'ಮಕರಸಂಕ್ರಾಂತಿವೃತ್ತ'ದ ಮೇಲೆ ಸೂರ್ಯನು ನೇರವಾಗಿ ಪ್ರಕಾಶಿಸಲಾರಂಭಿಸುವನು.

ಅಂದರೆ ಸಾಮಾನ್ಯವಾಗಿ ಪುಷ್ಯಮಾಸದಿಂದ ಆಷಾಡಮಾಸದವರೆಗೆ 6ತಿಂಗಳ ಕಾಲದ ಅವಧಿಗೆ ಹೊಂದಿಕೆಯಾಗಿದೆ, ಆದರೆ ಭೂಮಿಯ ಧ್ರುವಚಲನೆ ಅಥವಾ ವಕ್ರಾಯನದ ಪರಿಣಾಮವಾಗಿ, ಉತ್ತರಾಯಣವೂ ಸೂರ್ಯನ ಮಕರ ಸಂಕ್ರಮಣವೂ ಈಗ ಬೇರೆ-ಬೇರೆ ದಿನಗಳಂದೆ ನಡೆಯುತ್ತ ಎನ್ನುವರು, ಆದರೂ, ಉತ್ತರಾಯಣ ಪುಣ್ಯಕಾಲವನ್ನು ಈ ಹಿಂದಿನಂತೆಯೇ ಮಕರ ಸಂಕ್ರಾಂತಿಯಂದೇ ಆಚರಿಸಲಾಗುತ್ತದೆ. ಈ ಹಬ್ಬದ ಆಚರಣೆಯೇ ಸಂಬಂಧಗಳನ್ನು ಗಟ್ಟಿಗೊಳಿಸುವುದು. ಸಂಕ್ರಾಂತಿ ಹಬ್ಬದಲ್ಲಿ



ಎಳ್ಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ, ಅಂದು ದೇವಸ್ಥಾನಗಳಿಗೆ ಎಳ್ಳೆಣ್ಣೆ (ತಿಲ) ದಾನ ಕೊಡುವುದು ಅಥವಾ ದೀಪ ಹಚ್ಚುವುದರಿಂದ

ನಮ್ಮ ದೋಷಗಳು ಪರಿಹಾರವಾಗುತ್ತದೆ. ಮನೆಯ ಒಡತಿಯರು ಮುಂಜಾನೆ ಎದ್ದು ಬಾಗಿಲು ಸಾರಿಸಿ ಸುಂದರವಾದ ರಂಗೋಲೆ ಬಿಡಿಸುವ ಮೂಲಕ ಹಬ್ಬದ ಸಂಭ್ರಮದ ವಾತಾವರಣ ಸೃಷ್ಟಿಸುವರು.

ಹಬ್ಬದ ಅಡುಗೆಗಳನ್ನು ಅದರಲ್ಲಿ ಹುಗ್ಗಿ (ಮುದ್ಗಾನ್ನ), ಸಿಹಿ ಪೊಂಗಲ್(ಗುಡಾನ್ನ) ವನ್ನು ದೇವರಿಗೆ ನೈವೇದ್ಯವಿರಿಸಿ ಎಲ್ಲರೂ ಸಂತೋಷದಿಂದ ಮನೆಯ ಹಿರಿಯರೊಟ್ಟಿಗೆ ಸ್ವೀಕರಿಸುವರು. ಇನ್ನೂ ದೇವರ

ನೈವೇದ್ಯ ಮಾಡಿದಂತಹ ಎಳ್ಳು-ಬೆಲ್ಲ, ಸಕ್ಕರೆ ಅಚ್ಚು, ಬಾಳೆಹಣ್ಣು, ಕಬ್ಬು, ಕಡಲೆಕಾಯಿ ಸ್ವಲ್ಪ, ಎಲ್ಲವನ್ನು ಅಕ್ಕ-ಪಕ್ಕದ ಮನೆ, ಹಿರಿಯರಿರುವ ಮನೆ, ಸಂಬಂಧಿಕರ ಮನೆಗಳಿಗೆ ತೆರಳಿ ಎಳ್ಳು ಬೀರುವ

ಆಚರಣೆ ಇದೆ. ಸುಗ್ಗಿಯ ಸಂಭ್ರಮ ಹೊಸ ಲೋಕವನ್ನೇ ಸೃಷ್ಟಿಸುತ್ತದೆ. ಗೋವುಗಳನ್ನು ಅಲಂಕರಿಸಿ ಪೂಜಿಸುವರು, ಹೊಸದಾಗಿ ಬಂದಂತಹ ಧಾನ್ಯಗಳ ರಾಶಿಯನ್ನು ಪೂಜಿಸಿ ದೇವರಿಗೆ ಸಮರ್ಪಿಸುವರು.

ತಮಿಳು ನಾಡು:- ಇಲ್ಲಿನ ಜನ "ಪೊಂಗಲ್" ಎಂದು ಕರೆಯಲಾಗುತ್ತದೆ. ಇಲ್ಲಿ ನಾಲ್ಕು ದಿನಗಳ ಹಬ್ಬ, ಅಂದರೆ ಭೋಗಿ:- ಹೊಸ ಬಟ್ಟೆ ಧರಿಸುವುದು, ಕೇರಳ:- ಮಕರ ಸಂಕ್ರಾಂತಿಯಂದು ಕೇರಳದ ಶಬರಿಮಲೆಯಲ್ಲಿ ಕಾಣುವ ಮಕರಜ್ಯೋತಿಗೆ ಹೆಚ್ಚಿನ ಪ್ರಾಧಾನ್ಯತೆ ಹೊಂದಿದೆ.

ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಸಂಕ್ರಾಂತಿಯ ದಿನದಂದು ಗಾಳಿಪಟಗಳನ್ನು ಹಾರಿಬಿಡುವ ಸಂಪ್ರದಾಯ ಹೊಂದಿದ್ದಾರೆ. ಮಹಾರಾಷ್ಟ್ರದಲ್ಲಿ ಎಳ್ಳು-ಸಕ್ಕರೆಯ ಕುಸುರಿಕಾಳನ್ನು ಬಂಧು-ಮಿತ್ರರಿಗೆ ಹಂಚುವರು.

ಪಂಜಾಬ್-ಹರಿಯಾಣಗಳಲ್ಲಿ ಸಂಕ್ರಾಂತಿಗೆ "ಲೋಹರಿ" ಎಂದು ಕರೆಯುವರು ಮತ್ತು ಆಚರಿಸುವರು.

ಒಟ್ಟಿನಲ್ಲಿ ಉತ್ತರಾಯಣ ಪುಣ್ಯಕಾಲ ಎಳ್ಳಿಗೆ ಮಹತ್ವದ ದಿನವಾಗಿದೆ ಅಂದು ಕರಿಯೆಳ್ಳು ಅರೆದು ಅದನ್ನು ಹಚ್ಚಿಕೊಂಡು ಎಲ್ಲರೂ ಸ್ನಾನ ಮಾಡುವುದರಿಂದ ಮನುಷ್ಯ ನಿರೋಗಿಯಾಗುವನು ಎಂದು ಧರ್ಮಶಾಸ್ತ್ರ

ಗಳಲ್ಲಿ ಹೇಳಲಾಗಿದೆ.

"ಮಕರ ಸಂಕ್ರಮಣ" ದಂದು ಯಾರು ಎಳ್ಳು ಹಚ್ಚಿ ಸ್ನಾನ, ಎಳ್ಳು ದಾನ-ಭಕ್ಷಣ, ಎಳ್ಳಿನಿಂದ ತರ್ಪಣ, ಎಳ್ಳೆಣ್ಣೆಯ ದೀಪ ಹಚ್ಚುವರೋ ಅವರ ಪಾಪಗಳು ನಾಶವಾಗುತ್ತದೆ ಎಂದು ಪುರಾಣಗಳಲ್ಲಿ ತಿಳಿಸಿದ್ದಾರೆ.

ಸಂಕ್ರಾಂತಿಯ ಸಂಭ್ರಮಾಚರಣೆಯೊಂದಿಗೆ ಎಳ್ಳು-ಬೆಲ್ಲ ತಿಂದು ಎಲ್ಲರೊಂದಿಗೆ ಒಳ್ಳೊಳ್ಳೆ ಮಾತಾಡುತ್ತಾ ಹಿರಿಯರೊಟ್ಟಿಗೆ ಆನಂದದಿಂದ ಆಚರಿಸೋಣ.

ಮಕರ ಸಂಕ್ರಾತಿ ಎಲ್ಲರ ಬಾಳಲ್ಲೂ ಸುಖ-ಶಾಂತಿ, ಸಮೃದ್ಧಿಯೊಂದಿಗೆ ನೆಮ್ಮದಿ ತರಲಿ.

ಕೃಷ್ಣಾರ್ಪಣಮಸ್ತು.

ಸುಗ್ಗಿ-ಹುಗ್ಗಿ-ಪೊಂಗಲ್

ಹಬ್ಬಗಳೇ ಭಾರತದ ಸಾಂಸ್ಕೃತಿಕ ಉತ್ಸವಗಳು ನಂಬಿಕೆ, ಭಕ್ತಿ, ಸಂಸ್ಕೃತಿ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ರಚಿತವಾಗಿರುವ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಬ್ಬಗಳಿಗೆ ಬಹಳ ಮಹತ್ವವಿದೆ. ಕೇವಲ ಧಾರ್ಮಿಕವಾಗಿ ಮಾತ್ರವಲ್ಲದೆ ಪ್ರಾಕೃತಿಕ ಮತ್ತು ವೈಚಾರಿಕ ಅನುಭವದ ಸಾರವೂ ಅಡಗಿದೆ.

ಆಚರಣೆಗಳಲ್ಲಿ ಮೌಢ್ಯ ಮತ್ತು ಶೋಷಣೆಯ ಅಂಶಗಳನ್ನು ಹೊರತುಪಡಿಸಿದರೆ ನಿಜಕ್ಕೂ ಹಬ್ಬಗಳು ನಮ್ಮ ಬದುಕಿನ ಪುನಶ್ಚೇತನದ ಶಿಬಿರಗಳಂತೆ ಕೆಲಸ ಮಾಡುತ್ತವೆ......

ಆಧುನಿಕ ಬದುಕಿನ ವೇಗ ಮತ್ತು ಒತ್ತಡದ ನಡುವೆ ಹಬ್ಬಗಳನ್ನು ಮರು ವ್ಯಾಖ್ಯಾನ ಮಾಡಿ ಮತ್ತೊಮ್ಮೆ ಅದನ್ನು ಪುನರ್ ಸ್ಥಾಪಿಸಬೇಕು ಎಂದೆನಿಸುತ್ತದೆ ಸಂಕ್ರಾಂತಿ,

ಅನೇಕ ಆಘಾತಕಾರಿ ಘಟನೆಗಳು ಮನುಷ್ಯ ಜನಾಂಗವನ್ನು ಇನ್ನಿಲ್ಲದಂತೆ ಕಾಡುತ್ತಿರುವಾಗ, ಮಾಧ್ಯಮಗಳು ಅದಕ್ಕಿಂತ ಹೆಚ್ಚು ಬಾಲಿಶ ಸುದ್ದಿಗಳನ್ನು ಪ್ರಸಾರ ಮಾಡುತ್ತಿರುವಾಗ, ರಾಜಕಾರಣಿಗಳು ಅದಕ್ಕೂ ಮೀರಿ ಭ್ರಷ್ಟರಾಗುತ್ತಿರುವಾಗ,

ಉದ್ಯಮಿಗಳು ಎಲ್ಲವನ್ನೂ ಮೀರಿ ಹಣದಾಹಿಗಳಾಗುತ್ತಿರುವಾಗ ಸಾಮಾನ್ಯ ಜನರ ಪಾಲಿಗೆ ಬದುಕುವುದೇ ಒಂದು ಸಾಧನೆಯಾಗಿ ಜೀವ ಜೀವನದ ಆಯ್ಕೆಯ ಗೊಂದಲದಲ್ಲಿರುವಾಗ.......

ಹೊಸ ವರುಷ ಮೊದಲ ಹಬ್ಬ ನಮ್ಮ ಬಾಗಿಲ ಬಳಿ ನಿಂತಿದೆ.

ಈ ಸಂದರ್ಭದಲ್ಲಿ

ಆಗಲಿ ಮನಸುಗಳ ಕ್ರಾಂತಿ,

ಕನ್ನಡತೆ - ಸನ್ನಡತೆ - ಭಾರತೀಯತೆ - ಮಾನವೀಯತೆಯ ಕ್ರಾಂತಿ,

ತೊಲಗಲಿ ಮೌಢ್ಯಗಳ ಭ್ರಾಂತಿ,

ತುಡಿಯಲಿ ಸಹಜೀವಿಗಳೆಡೆಗೆ ಶಾಂತಿ,

ಮುಗಿಲೆತ್ತರಕ್ಕೇರಲಿ ಚಿಂತನೆಯ ಕ್ರಾಂತಿ,

ಪಾತಾಳಕ್ಕಿಳಿಯಲಿ ಕಲ್ಮಶದ ಭ್ರಾಂತಿ

ಹಬ್ಬದ ಸಂಭ್ರಮಗಳು ನಮ್ಮ ಮೈ ಮನಸ್ಸಿಗೆ ವಿಶ್ರಾಂತಿ ನೀಡಲಿ, ನಮ್ಮ ಆತ್ಮಾವಲೋಕನಕ್ಕೆ ಸಮಯಾವಕಾಶ ಕಲ್ಪಿಸಲಿ.....,

ಯೋಚಿಸೋಣ - ಮತ್ತೆ ಮತ್ತೆ,

ಸರಿ ತಪ್ಪುಗಳ ವಿಮರ್ಶೆಗೆ ಒಳಪಡೋಣ,

ಇತಿಹಾಸದ ಬೆಳಕಲ್ಲಿ ವರ್ತಮಾನದ ಕತ್ತಲನ್ನು ಓಡಿಸೋಣ,

ನಮ್ಮ ನೋವು, ಯಾತನೆಗಳನ್ನು ಕಡಿಮೆ ಮಾಡಿಕೊಳ್ಳೋಣ,

ನಮ್ಮ ಕಷ್ಟಗಳನ್ನು ಎದುರಿಸುವ ಛಲ ಬೆಳೆಸಿಕೊಳ್ಳೋಣ,......

ನಮ್ಮ ನಂಬಿಕೆ ಏನೇ ಇರಲಿ,

ನಿಯತ್ತು ಮಾತ್ರ ಸೃಷ್ಟಿಗೇ ಇರಲಿ,

ಏಕೆಂದರೆ ಗಾಳಿ, ನೀರು, ಆಹಾರ ಮಲಿನವಾಗುತ್ತಿದೆ,

ಇತ್ತೀಚಿನ ಅಧ್ಯಯನದ ವರದಿ ಪ್ರಕಾರ,

ವಾಯುಮಾಲಿನ್ಯದಿಂದ ಭಾರತದಲ್ಲಿ ವರ್ಷಕ್ಕೆ 15 ಲಕ್ಷಕ್ಕೂ ಹೆಚ್ಚು ಜನ ಸಾಯುತ್ತಿದ್ದಾರೆ, ನೀರಿನಿಂದ ಇನ್ನೆಷ್ಟು ಜನ ಸಾಯುತ್ತಿದ್ದಾರೋ,

ಕಲಬೆರಕೆ ಆಹಾರದಿಂದ ಮತ್ತೆಷ್ಟೋ ,

ಬಹುಶಃ ಯುದ್ದದಿಂದಲೂ ಇಷ್ಟು ಜನ ಸಾಯುವುದಿಲ್ಲವೇನೋ.....,

ಛೇ.. ಛೇ

ಇದೇನು ಹುಚ್ಚಾಟ ...

ಆಸ್ಪತ್ರೆ - ಪೋಲಿಸ್ ಸ್ಟೇಷನ್ ಗಳ ಹೆಚ್ಚಾಟ

ಅಭಿವೃದ್ಧಿ ಎಂದರೆ ಇದೇನಾ,

ಆರೋಗ್ಯ ಮತ್ತು ವ್ಯಕ್ತಿತ್ವದ ವಿನಾಶವೇ,

ಬೇಡ,

ಇದು ಬೇಡವೇ ಬೇಡ,

ಈ ಸಂಕ್ರಾಂತಿ - ಈ ಹಬ್ಬ ,

ಆಧುನಿಕ ಮನೋಭಾವದವರಿಗೆ ಮತ್ತೆ ಸೃಷ್ಟಿಯತ್ತ ಮುನ್ನಡೆಯುವ ಮನಸ್ಸಾಗಲಿ,

ಬದುಕು ಸುಖಮಯವಾಗಲಿ,

ನಮ್ಮ ನಡೆ - ಪ್ರಕೃತಿಯ ಕಡೆಗೆ ಸಾಗಲಿ.

ಆಗ ನೋಡಿ,

ನಮ್ಮ ಬದುಕು ಈ ಆಧುನಿಕತೆಯ ಒತ್ತಡ ಮೀರಿ ನೆಮ್ಮದಿಯ ತಾಣವಾಗುವುದು ಖಚಿತ.......

ನೀವು ಹಾಗಲ ಕಾಯಿ - ಬೇವಿನ ಸೊಪ್ಪು ತಿಂದರೂ ನಿಮ್ಮ ಮನಸ್ಸು ಶುದ್ದವಾಗಿದ್ದರೆ, ನಿಮ್ಮ ಮಾತು ಮತ್ತು ನಡವಳಿಕೆ ಒಳ್ಳೆಯದೇ ಆಗಿರುತ್ತದೆ.....

ನೀವು ಎಳ್ಳು ಬೆಲ್ಲ ಕಬ್ಬು ತಿಂದರೂ,

ನಿಮ್ಮ ಮನಸ್ಸು ಕೊಳಕಾಗಿದ್ದರೆ, ಸಂಕ್ರಾಂತಿ ಹಬ್ಬದ ದಿನವೂ ನಿಮ್ಮಿಂದ ಒಳ್ಳೆಯ ಮಾತುಗಳು ಬರಲಾರವು. ಅಕಸ್ಮಾತ್ತಾಗಿ ಬಂದರೂ ಅದು ಕೃತಕವಾಗಿರುತ್ತದೆ ಮತ್ತು ಒಳಗಿನ ಅಸೂಯೆ ಗುಣಕ್ಕೆ ಮುಖವಾಡ ತೊಡಿಸಿದಂತಿರುತ್ತದೆ......

ಸಂಕ್ರಾಂತಿ ಹಬ್ಬದ ಜನಪ್ರಿಯ ನುಡಿ

"ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡು" ಎಂಬುದು ದುಷ್ಟ ಮನಸ್ಸಿನ ಜನರಿಗೆ ಅವರ ವಿಕೃತಿಯನ್ನು ನೆನಪಿಸುವ ಸಾಂಕೇತಿಕ ಮಾತುಗಳು ಮಾತ್ರ. ಒಳ್ಳೆಯ ಮನಸ್ಸಿನವರಿಗೆ ಇದು ಅನ್ವಯಿಸುವುದೇ ಇಲ್ಲ.....

ಏಕೆಂದರೆ ನಿಮ್ಮ ಆಲೋಚನೆಗಳ ಮೇಲೆ ನೀವು ನಿಯಂತ್ರಣ ಹೊಂದಿ ಸಮಷ್ಟಿ ಪ್ರಜ್ಞೆಯಿಂದ ಸದಾ ಕಾಲ ಯೋಚಿಸುವವರು ನೀವಾಗಿದ್ದರೆ - ನಾಗರಿಕ ಪ್ರಜ್ಞೆ ನಿಮ್ಮದಾಗಿದ್ದರೆ, ಸಂಕ್ರಾಂತಿ ಹಬ್ಬದ ಈ ಹಿತ ನುಡಿಗಳನ್ನು ನಿಮಗೆ ಹೇಳುವ ಅವಶ್ಯಕತೆ ಇರುವುದೇ ಇಲ್ಲ.....

ಶತ ಶತಮಾನಗಳಿಂದ ಭಾರತೀಯ ಸಂಸ್ಕೃತಿಯಲ್ಲಿ ಸಂಕ್ರಾತಿಯನ್ನು ವಿವಿಧ ಹೆಸರುಗಳಲ್ಲಿ ಸೂರ್ಯನ ಪಥ ಸಂಚಲನ ಬದಲಾಯಿಸುವ - ಪ್ರಕೃತಿಯಲ್ಲಿ ಆಗುವ ಬದಲಾವಣೆಗಳನ್ನು ವೈಜ್ಞಾನಿಕವಾಗಿ ಗಮನಿಸಿ ಆಚರಿಸಲಾಗುತ್ತದೆ . ಅದು ತುಂಬಾ ಸಂತೋಷದ ವಿಷಯ. .....

ಆದರೆ , ಅದೇ ಮಾತನ್ನು ಅನೇಕ ಭಾರತೀಯರ ಮನಸ್ಸು ಮತ್ತು ಮಾತುಗಳ ವಿಷಯದಲ್ಲಿ ಹೇಳಲು ಸಾಧ್ಯವಿಲ್ಲ ಎಂದು ವಿಷಾದದಿಂದಲೇ ಹೇಳಬೇಕಾಗಿದೆ.....

ಈ ಕ್ಷಣದಲ್ಲಿ ನಮ್ಮ ರಾಜಕೀಯ ನಾಯಕರು, ಅಧಿಕಾರಿಗಳು, ಎಲ್ಲಾ ಧರ್ಮಗಳ ಧಾರ್ಮಿಕ ನಾಯಕರು, ಕೆಲವು ಸಂಘಟನೆಗಳ, ಸಂಸ್ಥೆಗಳ ವಿಕೃತ ಮನಸ್ಸಿನ ಸ್ವಯಂ ಘೋಷಿತ ನಾಯಕರು, ಅಷ್ಟೇ ಏಕೆ, ಮಾಧ್ಯಮಗಳು ಮತ್ತು ocial media ದ ಕೆಲವು ಸಂಕುಚಿತ ಮನೋಭಾವದವರು ಎಷ್ಟೊಂದು ಅಸಹ್ಯಕರವಾಗಿ ವರ್ತಿಸುತ್ತಾರೆಂದರೆ ಅವರಿಗೆ ನೀವು ಜೇನನ್ನು ತಿನ್ನಿಸಿದರೂ ಅವರ ಮನಸ್ಸಿನಿಂದ ಒಳ್ಳೆಯ ಮಾತುಗಳು ಬರಲಾರದಷ್ಟು ಕೆಟ್ಟ ಪರಿಸ್ಥಿತಿಯಲ್ಲಿ ನಾವಿದ್ದೇವೆ.....

ನಾವು ಸೇವಿಸುವ ಆಹಾರಕ್ಕೂ ನಮ್ಮ ಮಾತು ಮನಸ್ಸು ಭಾವನೆಗಳಿಗೂ ಅಂತಹ ಸಂಬಂಧವೇನೂ ಇಲ್ಲ. ನಾವು ಈ ಸಮಾಜವನ್ನು ಗ್ರಹಿಸಿರುವ ನಮ್ಮ ಅರಿವಿನಿಂದ ಮಾತ್ರ ನಾವು ಶುದ್ಧ ಮನಸ್ಥಿತಿಯವರಾಗಲು ಸಾಧ್ಯ....

ಅಂತಹ ಸಾಧ್ಯತೆ ಈ ಸಂಕ್ರಾಂತಿಯ ಸಂದರ್ಭದಲ್ಲಿ ಆಗಲಿ, ಹಬ್ಬದ ಸಾಂಕೇತಿಕತೆ ಮತ್ತು ಕೃತಕತೆಯನ್ನು ಮೀರಿ ನಾವು - ನೀವು ಇನ್ನು ಮುಂದೆಯಾದರು ಸಾಧ್ಯವಾದಷ್ಟೂ ನಮ್ಮಲ್ಲಿರಬಹುದಾದ ವಿಕೃತ ಮನಸ್ಥಿತಿಯನ್ನು ನಿಯಂತ್ರಿಸಿಕೊಂಡು ಮುಖವಾಡ ಕಳಚಿ ನಿಜ ಸಭ್ಯತೆಯನ್ನು ಆಚರಣೆಗೆ ತರುವ ಸಂಕಲ್ಪದೊಂದಿಗೆ ಈ ಮಣ್ಣಿನ ಋಣವನ್ನು ಸ್ವಲ್ಪವಾದರೂ ತೀರಿಸೋಣ ಎಂಬ ಆಶಯದೊಂದಿಗೆ.........

| ವಿವೇಕಾನಂದ. ಎಚ್. ಕೆ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,